ತಾರೀಖು 1ನೇ ಜುಲೈ 1903.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಈ ಕೆಳಗೆ ನಮೂದಿರುವ ತಾಲ್ಲೂಕಿನ ಸರ್ಕಾರಿ ಖಂಜರ್ ಮತ್ತು ಅವ್ಯತವಮಹಲ್ ಕಾವಲುಗಳಲ್ಲಿ ಮತ್ತು ಸ್ಟೇಟ್ ಫಾರೆಸ್ಟುಗಳಲ್ಲಿ ಇರತಕ್ಕ ತಂಗಡಿ ಚಕ್ಕೆಯನ್ನು 1903ನೇ ಆಗಸ್ಟ್ ತಾರೀಖು 1ರ ಲಾಗಾಯತು 1904ನೇ ಇಸವಿ ಜೂ॥ 30ರ ವರಿಗೆ ಜಮಾಯಿಸಿಕೊಳ್ಳತಕ್ಕ ಹಕ್ಕು ಈ ಕೆಳಗೆ ನಮೂದಿಸುವ ತಾರೀಖು ಮತ್ತು ಸ್ಥಳದಲ್ಲಿ ಡೆಪ್ಯುಟಿ ಕಮ್ಮಿಷನರವರಿಂದಾಗಲಿ ಅಥವಾ ಅವರಿಂದ ನೇಮಿಸಲ್ಪಡುವ ಇತರ ಆಫಿಸರಿಂದಾಗಲಿ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರ ಕೂಡಾ ಬಹಿರಂಗವಾದ ಹರಾಜ್ ಮೂಲಕ ವಿಕ್ರಯಿಸಲ್ಪಡುತ್ತೆ :—

ನಂಬರು.	ತಾಲ್ಲೂಕುಗಳ ಮತ್ತು ಸ್ಟೇಟ್ ಫಾರೆಸ್ಟುಗಳ ಹೆಸರು.	ಹರಾಜು ತಾರೀಖು.	ಹರಾಜು ಸ್ಥಳ.
1	ಹರಿಹರ ಸಬ್ ತಾಲ್ಲೂಕು ..	20–7–1903	ಹರಿಹರ ಸಬ್ ತಾಲ್ಲೂಕು ಕಛೇರಿ
2	ಮಲೆಬೆನ್ನೂರು ಸ್ಟೇಟ್ ಫಾರೆಸ್ಟ್ ..		
3	ಜಗಳೂರು ತಾಲ್ಲೂಕು ..	25–7–1903	ತಾಲ್ಲೂಕು ಕಛೇರಿ
4	ಚಳ್ಳಕೆರೆ ತಾಲ್ಲೂಕು ..	27–7–1903	ಚಳ್ಳಕೆರೆ ತಾಲ್ಲೂಕು ಕಛೇರಿ
5	ಹಿರಿಯೂರು ತಾಲ್ಲೂಕು ..	29–7–1903	ಹಿರಿಯೂರು ಡಿಟೋ
6	ಚಿತ್ರದುರ್ಗದ ತಾಲ್ಲೂಕು ..	30–7–1903	ಚಿತ್ರದುರ್ಗದ ಡಿಸ್ಟ್ರಿಕ್ಟ್ ಆಫೀಸ್
7	ಜೋಗಿಮಟ್ಟಿ ಸ್ಟೇಟ್ ಫಾರೆಸ್ಟ್ ..		
8	ನೀರ್ಥಡಿ ಸ್ಟೇಟ್ ಫಾರೆಸ್ಟ್ ..		

2. ಹರಾಜು ಪಟ್ಟಿಯಲ್ಲಿ ಕಂಡಂತೆ ಹರಾಜು ತಾರೀಖಿನ ಪ್ರತಿ ದಿವಸಗಳಲ್ಲಿಯೂ ಮಧ್ಯಾಹ್ನ 2 ಘಂಟೆಗೆ ಹರಾಜು ಶುರು ಮಾಡಲ್ಪಡುವದು. ಅದೇ ದಿವಸದಲ್ಲಿ ಹರಾಜು ಪೂರೈಸದ ಪಕ್ಷಕ್ಕೆ ಮಾರನೇ ದಿವಸ ಅದೇ ಕಾಲಕ್ಕೆ ಸರಿಯಾಗಿ ಹರಾಜು ನಡಿಸಲ್ಪಡುವದು.

3. ಮೇಲೆ ನಮೂದಿಸುವ ತಂಗಡಿ ಚಕ್ಕೆ ಜಮಾವಣಿ ಹಕ್ಕನ್ನು ಡೆಪ್ಯುಟಿ ಕಮ್ಮಿಷನರವರ ಮಂಜೂರಾತಿಗೆ ಬಳಸಟ್ಟು ಆಖೈರ್ ಚಡವರಖಾಸ್ತುದಾರನಿಗೆ ವಹಿಸಲ್ಪಡುವದು. ಈ ರೀತಿಯಾದ ಆಖೈರ್ ಚಡಸವಾಲನ್ನ ಮಂಜೂರ್ಮಾಡುವದಕ್ಕೂ ಅಥವಾ ತರಸ್ತರಿಸುವದಕ್ಕೂ ಡೆಪ್ಯುಟಿ ಕಮ್ಮಿಷನರವರು ಸ್ವತಂತ್ರರಾಗಿ ಇರುತ್ತಾರೆ. ಅಂಗೀಕರಿಸಲ್ಪಟ್ಟ ಸವಾಲ್ ಮೊಬಲಗು 1903ನೇ ಸಾಲ್ ಆಗಸ್ಟ್ ತಾರೀಖು 1ರ ಲಾಗಾಯತು 1904ನೇ ಇಸವಿ ಜೂ॥ ತಾರೀಖು 30ರ ವರಿಗಿನ 11 ತಿಂಗಳುಗಳಲ್ಲಿ ತಂಗಡಿ ಚಕ್ಕೆ ಜಮಾವಣಿ ಬಗ್ಯೆ ಪಾವತಿ ಮಾಡತಕ್ಕ ಮೊಬಲಗಾಗಿ ಇರುತ್ತದೆ.

4. ಚಡದರಖಾಸ್ತು ಮಾಡಲು ಇಷ್ಟ್ಯವುಳ್ಳ ಜನಗಳು ಖುದ್ದಾಗಲಿ ಅಥವಾ ಅವರುಗಳಿಂದ ಕ್ರಮಪ್ರಕಾರ ಅಪ್ಪಣೆಪಡೆದ ಏಜಂಟರುಗಳ ಮೂಲಕವಾಗಲಿ ಹಾಜರಾಗಬಹುದು. ಯಾವ ಮನುಷ್ಯನಾಗಲಿ 50 ರೂಪಾಯಿಗಳು ಡಿಪಾಜಿಟ್ ಇಡುವದಕ್ಕೆ ಮುಂಚಿತವಾಗಿ ತನಗೋಸ್ಕರ ಅಥವಾ ಇತರರಿಗೋಸ್ಕರವಾಗಿಯಾಗಲಿ ಚಡ ಸವಾಲ್ಮಾಡಲು ಅಪ್ಪಣೆ ಕೊಡಲ್ಪಡುವದಿಲ್ಲ. ಚಡ ಸವಾಲ್ದಾರನಲ್ಲದ ಇತರ ಡಿಪಾಜಿಟೆದಾರರ ಮೊಬಲಗನ್ನ ಹರಾಜು ಕೈದಾದ ವಡನೆ ವಾಪಸ್ ಮಾಡಲ್ಪಡುವದು. ಆಖೈರ್ ದರ ಖಾಸ್ತುದಾರರು ಹರಾಜು ಖೈದಾದ ವಡನೆ ಮೊದಲು ಅವರು ಇಟ್ಟುಇದ್ದ ಡಿಪಾಜಿಟ್ ಮೊಬಲಗು ಸೇರಿ ಹರಾಜ್ ಮೊಬಲಗಿನ ಕಾಲು ಹಿಸ್ಸೆ ಹಣವನ್ನ ಆಯಾ ತಾಲ್ಲೂಕು ಖಜಾನೆಗೆ ಪಾವತಿ ಮಾಡತಕ್ಕದ್ದು. ಹೀಗೆ ಮಾಡದೆ ತಪ್ಪಿದಲ್ಲಿ ಮೊದಲು ಇಟ್ಟಿದ್ದ ಠೇವಣಿ ಮೊಬಲಗನ್ನ ಸರಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳಲ್ಪಡುವದಲ್ಲದೆ ಬಾಬು ಹರಾಜು ಮಾಡುತ್ತಾ ಇದ್ದ ಆಫಿಸರರಿಂದ ದುಸರಾ ಹರಾಜು ಮಾಡಲ್ಪಡುವದು.

5. ಮೇಲ್ಕಂಡ ಪ್ಯಾರಾದಲ್ಲಿ ನಮೂದಿಸುವಂತೆ ನಡಿಸಲ್ಪಡುವ ದುಸರಾ ಹರಾಜು ಹಣ ಕೊಡಲು ತಪ್ಪಿದ ಅವಲ್ ಚಡ ಖಾಸ್ತುದಾರನ ರಿಸ್ಕಿಗೆ ಬಳಪಟ್ಟಿರುತ್ತೆ. ದುಸರಾ ಹರಾಜಿನಲ್ಲಿ ಜಾಸ್ತಿ ಮೊಬಲಗು ಉತ್ಪತ್ತಿ ಆದಲ್ಲಿ ಅಂಥಾ ಜಾಸ್ತಿ ಮೊಬಲು ಹಕ್ಕು ಅವಲ್ ಚಡದರಖಾಸ್ತುದಾರನಿಗೆ ಇರುವದಿಲ್ಲ. ಅದರೆ ಈ ರೀತಿ ನಡಿಸುವ ದುಸರಾ ಹರಾಜಿನಲ್ಲಿ ಹುಟ್ಟುವ ಮೊಬಲು ದಲಿನ ಹರಾಜು ಮೊಬಲಗ್ಯೆ ಕಡಮೆ ಆದಲ್ಲಿ ಅಂಥಾ ಕಮ್ಮಿ ಆಗುವ ಮೊಬಲಗು ಅವಲ್ ದರಖಾಸ್ತುದಾರನು ಪಾವತಿ ಮಾ ದ್ದಾಗಿರುತ್ತೆ.

6. ಇಜಾರೆದಾರನು ಕೆಳಗೆ ನಮೂದಿಸುವ ಷರತ್ತುಗಳ ಅನುಸರಿಸಿ ಬಂದು ಮುಚ್ಚ್ಯೆಳಿಕೆ ಬರದು ಕೊಡತಕ್ಕದ್ದು. ಚ್ಚ್ಯೆಳಿಕೆಯನ್ನು ಇಜಾರೆ ಮಂಜೂರಾದ ಸಂಗತಿ ಇಜಾರೆದಾರನಿಗೆ ತಿಳಿಸಿದ 15 ದಿನಗಳ ಒಳಗಾಗಿ ಓದುಕೊಡತಕ್ಕದ್ದಾಗಿರುತ್ತದೆ.

7. ಬಾಕಿ ಉಳಿಯುವ ಮೊಬಲಗನ್ನು 1903ನೇ ಇಸವಿ ಜುಲೈ ಆಖೈರ್ ಒಳಗಾಗಿ ಪಾವತಿ ಮಾಡತಕ್ಕದ್ದು. ಹೀಗೆ ಮಾಡದೆ ತಪ್ಪಿದಲ್ಲಿ ಇಜಾರೆದಾರನು ಮೊದಲು ಇಟ್ಟು ಇದ್ದ ಠೇವಣಿ ಮೊಬಲಗನ್ನು ದಂಡವಾಗಿ ಸರಕಾರಕ್ಕೆ ದಾಖಲ್ಮಾಡಿಕೊಳ್ಳುವದಲ್ಲದೆ ಇಜಾರೇ ಹಕ್ಕಿನ ಬಾಧ್ಯತೆ ಹೋಗಲಾಡಿಸಿಕೊಳ್ಳುವದಲ್ಲದೆ, ಬಾಬು ದುಸರಾ ಹರಾಜಿಗೆ ಬಳಪಡಿಸಲ್ಪಡುವದು. ರೂಪಾಯಿ 1ಕ್ಕೆ ಬಂದಾಣೆ ಮೇರೆಗೆ ಸೆಸ್ಸು ವಸೂಲ್ಮಾಡಲ್ಪಡುತ್ತೆ.

ಷರತ್ತುಗಳು.

1. ಎರಡು ವರುಷಕ್ಕೆ ಮೇಲ್ಪಟ್ಟ ದೊಡ್ಡದಾದ ಯಾ ಸಂಣದಾದ ಎಲ್ಲಾ ಗಿಡಗಳನ್ನ ನೆಲಮಟ್ಟಕ್ಕೆ ಕಡಿಯತಕ್ಕದ್ದು.

2. ಎರಡು ವರುಷಕ್ಕೆ ಬಳಪಟ್ಟ ಎಳೇಗಿಡಗಳನ್ನು ಇಜಾರೆದಾರನ ನವಕರರಾಗಲಿ ಅಥವಾ ಆತನ ಪಿಕಿಮಿ ಕಂಟ್ರಾಕ್ಟುದಾರರಾಗಲಿ ಕಡಿಯುದಂತೆ ಅಡ್ಡಿ ಮಾಡಲು ಇಜಾರೆದಾರನು ಜವಾಬುದಾರನಾಗಿ ಇರತಕ್ಕದ್ದು.

3. ಕೆಲಸ ನಡಿಸಲು ವಿಂಗಡಿಸಲ್ಪಡುವ ಪ್ರತಿ ಬಂದು ಸರ್ಕ್ಕಲಿನಲ್ಲಿ ನೇಮಿಸಲ್ಪಡುವ ಇಜಾರೆದಾರನ ಮೇಸ್ತ್ರಿಗಳ ಮತ್ತು ಷಿಕಿವಿ ಕಂಟ್ರಾಕ್ಟ್ದಾರರುಗಳ ಹೆಸರಿನ ಬಂದು ಲೀಸ್ಟು ಕೊಡತಕ್ಕದ್ದು. ಮತ್ತು ಚಕ್ಕೆ ದಾಸ್ತಾನುಮಾಡುವ ಕೋಠಿ ಸಹ ನಮೂದಿಸಬೇಕು.

4. ತೊಬಟೆ ತೆಗದನಂತರ ಆ ಸಮ್ಮಂಧವಾದ ವಿಸಿಪ್ಪು ಸಾದೆಯು ಇಜಾರೆದಾರನಿಗೆ ಸೇರಿದ್ದಾಗಿ ಇರುತ್ತದೆ.

5. ಇಜಾರೆಗೆ ಸಂಬಂಧಪಟ್ಟ ಚಕ್ಕೆ ಜಮಾವಣಿ ಆದಬಗ್ಗೆ ತಪಶೀಲ್ ಲೆಕ್ಕ ಇಡತಕ್ಕದ್ದಲ್ಲದೆ ಅಂಥಾ ಲೆಕ್ಕವನ್ನು ಡೆಪ್ಯೂಟಿ ಕವ್ಮಿಷನರಾಗಲಿ ಅಥವಾ ಡಿಸ್ಟ್ರಿಕ್ಟು ಫಾರೆಸ್ಟ್ಟ ಆಫಿಸರರೇ ಆಗಲಿ ಅಥವಾ ಇವರುಗಳ ಪೈಕಿ ಯಾರಿಂದಲೇ ಆಗಲಿ ನೇಮಿಸಲ್ಪಡುವ ಇತರ ಯಾವ ಆಫಿಸರರೇ ಆಗಲಿ ತನಿಖೆಗೆ ಬಂದಾಗ ಅವರ ತನಿಖೆಗೆ ಮೇಲ್ಕಂಡ ಲೆಕ್ಕಗಳನ್ನು ಹಾಜರ್ಮಾಡತಕ್ಕದ್ದು.

6. ಸಾಗಿಸಿಕೊಂಡು ಹೋಗುವ ಪ್ರತಿ ಬಂದು ಗಾಡಿ ಬೋಜ ಚಕ್ಕೆಗೂ ಡಿಸ್ಟ್ರಿಕ್ಟು ಫಾರೆಸ್ಟ್ಟ ಆಫಿಸರರು ಮೊಕರರ್ ಮಾಡುವ ರೀತಿಯಲ್ಲಿ ಪ್ಯಾಸು ಪಡಿಯತಕ್ಕದ್ದು.

7. ಇಜಾರೆಗೆ ಸಂಬಂಧಪಟ್ಟ ವಿಸಿಪ್ಪು ಚಕ್ಕೆಯನ್ನು 1904ನೇ ಇಸವಿ ಜೂನ್ ಆಖೈರ್ ಒಳಗಾಗಿ ಜಮಾಯಿಸಿ ದಾಸ್ತಾನು ಇಟ್ಟುಯಿದ್ದ ಕೋಠಿಗಳ ಯಾ ರೈಲ್ವೆ ಸ್ಟೇಷನ್ನುಗಳಲ್ಲಿನ ಚಕ್ಕೆಯನ್ನು ಡಿಸ್ಟ್ರಿಕ್ಟು ಸರಹದ್ದು ಹೊರಕ್ಕೆ ತೆಗದು ಕೊಂಡು ಹೋಗತಕ್ಕದ್ದು.

8. ಮೇಲೆ ನಮೂದಿಸುವ ಷರತ್ತಿನ ಯಾವದಾದರೂ ಬಂದು ಷರತ್ತಿಗಾದರೂ ತಪ್ಪು ನಡದಲ್ಲಿ ಇಜಾರೆಯ ಹಕ್ಕು ರದ್ದು ಮಾಡಲ್ಪಡುವದಲ್ಲದೆ ಅದುವರಿಗೆ ಜಮಾಯಿಸ್ಯೋಣವಾಗಿದ್ದ ಚಕ್ಕೆ ವಿಸಿಪ್ಪೆಲ್ಲಾ ಸರಕಾರಕ್ಕೆ ದಂಡವಾಗಿ ತೆಗದು ಕೊಳ್ಳಲ್ಪಡತಕ್ಕದ್ದು. ಮತ್ತು ಇಜಾರೆದಾರನು ಡೆಪ್ಯೂಟಿ ಕವ್ಮಿಷ್ಣರ್ ಸಾಹೇಬರವರಿಂದ 1,000 ಬಂದು ಸಾವಿರ ರೂಪಾಯಿವರಿಗೆ ಜಾಮೀನೆ ವಿಧಿಸಲ್ಪಡುವದಕ್ಕೆ ಬದ್ಧನಾಗಿರುತ್ತಾನೆ.

ಕೆ. ಶಾಮಯ್ಯಂಗಾರ್,
ಫಾರ್ ಡೆಪ್ಯೂಟಿ ಕವ್ಮಿಷನರ್, ಚಿತ್ರದುರ್ಗ ಡಿಸ್ಟ್ರಿಕ್ಟ್ಸ್.

ಕೊಡಗು ಫಾರೆಸ್ಟ್ಟ ಇಲಾಖೆ.

ನೊ ಟೀ ಸ್ .

ಕರೀವುರದ ವ್ಯಾಪಾರ.

ಮಲಬಾರು ಜಿಲ್ಲಾ ಬೆವಿಯಾಪಟ್ಟಣದಲ್ಲಿ ಈಗ ಜಮಾಯಿಸಿ ಇಟ್ಟಿರುವ ಹೆಚ್ಚು ಕಡಿಮೆ 1100 ಕ್ಯೂಬಿಕ್ ಫೂಟು ಉಳ್ಳ 5 ಲಾಟು ಸಾಧಾರಣ ಕೆತ್ತಿರುವ ಕರೀ ಮರವನ್ನು ಕೊಂಡುಕೊಳ್ಳುವ ಬಗ್ಗೆ 1903ನೇ ಇಸವಿ ಆಗಸ್ಟ್ಟ ತಾರೀಖು 1ನೇ ವರೆಗೆ ದರಖಾಸ್ತುಗಳು ತೆಗದುಕೊಳ್ಳಲ್ಪಡುವವು. ತೊಲೆಗಳ ಪಟ್ಟಿಯನ್ನು ಕೊಡಗುಜಿಲ್ಲಾ ಡೆಪ್ಯೂಟಿ ಕನ್ಸರ್ವೇಟರ್, ಮಡಿಕೇರಿ, ಇವರುಗಳಿಗೆ ಬರೆದು ತರಿಸಿಕೊಳ್ಳಬಹುದು.

2. ಪ್ರತಿ ಬಂದು ದರಖಾಸ್ತಿನೊಡನೆ ಬಂದುನೂರು ರೂಪಾಯಿನ ಕರೆನ್ಸಿ ನೋಟನ್ನು ಅಡ್ವಾನ್ಸಾಗಿ ಕಳ್ಳುಹಿಸತಕ್ಕದ್ದು. ತಪ್ಪಿದಲ್ಲಿ ದರಖಾಸ್ತುಗಳು ತಿರಸ್ಕರಿಸಲ್ಪಡುವವು. ದರಖಾಸ್ತು ಇರುವ ಲಿಫಾಫೆಗಳನ್ನು "ಕೊಡಗು ಫಾರೆಸ್ಟ್ಟ ಡೆಪ್ಯೂಟಿ ಕನ್ಸರ್ವೇಟರ್ ಸಾಹೇಬರವರಿಗೆ–ಮಡಿಕೇರಿ" ಎಂದು ವಿಳಾಸ ಬರೆದು ಇನ್ಷೂರ್ ರಿಜಿಸ್ಟರ್ ಮಾಡಿದ್ದಲ್ಲಿ "ಕರೀವುರ ಕೊಂಡುಕೊಳ್ಳುವ ಬಗ್ಗೆ ದರಖಾಸ್ತು" ಎಂದು ಲಿಫಾಫೆಯ ಮೇಲೆ ಬರೆದಿರಬೇಕು.

3. ತಲಪಿರುವ ದರಖಾಸ್ತುಗಳನ್ನೆಲ್ಲಾ 1903ನೇ ಇಸವಿ ಆಗಸ್ಟ್ಟ 1ನೇ ತಾರೀಖಿನಲ್ಲಿ ವಡಿಯಲ್ಪಡುವವು. ಈ ತಾರೀಖಿನಂತರ ತಲಪುವ ದರಖಾಸ್ತುಗಳನ್ನು ವಡಿಯದೇನೇ ಟಪ್ಪಾಲು ಆಫೀಸಿಗೆ ವಾಪಸು ಕಳುಹಿಸಲ್ಪಡುವವು.

4. ದರಖಾಸ್ತುದಾರನು ಮೇಲ್ಕಂಡ ತೊಲೆಗಳ ಪಟ್ಟಿಯಲ್ಲಿ ಕಾಣುವ ಪ್ರತಿ ಬಂದು ಲಾಟಿಗೆ ಪ್ರತ್ಯೇಕವಾಗಿ ತನ್ನ ದರವನ್ನು ನಮೂದಿಸತಕ್ಕದ್ದು. ದರಖಾಸ್ತುಗಳನ್ನು ಬಂದೊಂದು ಕ್ಯೂಬಿಕ್ ಫೂಟಿಗಾಗಲಿ ಯಾ ಇಂಥಿಂಥಾ ತೊಲೆಗಳಿಗೆಂತಾಗಲಿ ಯಾ ಎರಡು ಯಾ ಹೆಚ್ಚು ಲಾಟುಗಳಿಗೆ ಇಷ್ಟು ಒಟ್ಟು ಹಣ ಯೆಂತಾಗಲಿ ಯಾ ಎಲ್ಲಾ ಮರಕ್ಕೆ ಇಷ್ಟೇ ಹಣ ಯೆಂತಾಗಲಿ ಕೇಳಕೂಡದು.

5. ಜಾಸ್ತಿ ದರದ ಯಾವ ದರಖಾಸ್ತನ್ನಾಗಲಿ ಅಂಗೀಕರಿಸಲೇಬೇಕೆಂಬುವದಕ್ಕೆ ಡೆಪ್ಯೂಟಿ ಕನ್ಸರ್ವೇಟರ್ ಸಾಹೇಬರವರು ಬದ್ಧರಾಗಿರುವದಿಲ್ಲಾ. ದರಖಾಸ್ತು ಮಂಜೂರಾತಿಯನ್ನು ಸದರಿ ದರಖಾಸ್ತುದಾರನಿಗೆ ತಿಳಿಸಲ್ಪಡುತ್ತೆ. ಇತರ ದರಖಾಸ್ತುದಾರರ ಅಡ್ವಾನ್ಸನ್ನು ವೊಬಲಗು ಸ್ವಾಂಪು ಹಚ್ಚಿಸಿರುವ ರಸೀತಿಗಳನ್ನು ಹಾಜರು ಮಾಡಿದ ವಡನೆ ಅವರಿಗೆ ವಾಪಸು ಮಾಡಲ್ಪಡುವದು.

6. ಖರೀದಿದಾರನು ದರಖಾಸ್ತು ಮಂಜೂರಾದ ಏಳುದಿವಸಗಳೊಳಗೆ ಅವನಿಗೆ ಕೊಡಲ್ಪಡುವ ಅಡ್ವಾಯಿಸು ಮೇರೆ ಖರೀದಿ ವೊಬಲಗಿನ ದಶಾಂಶವನ್ನು ಠೇವಣಿ ಬಗ್ಗೆ ಬಾಕಿ ಹಣವನ್ನು (ವೊದಲು ಇಟ್ಟ ಅಡ್ವಾನ್ಸು ಹಣ ವಜಾಮಾಡಿ) ಮಂಜೂರಾದ 30 ದಿವಸಗಳೊಳಗೂ ಖಜಾನೆಗೆ ಪಾವತಿ ಮಾಡತಕ್ಕದ್ದು. ಸದರಿ ಎರಡು ವೊಬಲಗುಗಳಲ್ಲಿ ಯಾವದಾದರೂ ಬಂದನ್ನೇ ಆಗಲಿ ಪಾವತಿ ಮಾಡಲು ತಪ್ಪಿದ್ದಲ್ಲಿ ದರಖಾಸ್ತು ರದ್ದುಮಾಡಿ ಅಡ್ವಾನ್ಸು ಹಣ ಸರ್ಕಾರಕ್ಕೆ ದಂಡವಾಗಿ ಕೇರಿಸಿಕೊಂಡು ಮಾರಾಟ ಪುನಹ ಮಾಡಿ ಅದರಿಂದ ಉಂಟಾಗುವ ನಷ್ಟಕ್ಕೆ ವೊದಲನೇ ದರಖಾಸ್ತುದಾರನನ್ನು ಬದ್ಧನನ್ನಾಗಿ ಮಾಡಲ್ಪಡುವದು.

7. ಮಾರಲ್ಪಟ್ಟ ಮರವು ಮಂಜೂರಾದ ತಾರೀಖು ಲಾಗಾಯಿತು ದರಖಾಸ್ತುದಾರನ ಜವಾಬ್ದಾರಿಯಲ್ಲೇ ಇರುವದು. ಆದರೆ ಮರ ಸಾಗಿಸಲು ಪೂರಾ ವೊಬಲಗು ಪಾವತಿ ಮಾಡಿದ್ದಲ್ಲದೆ ಬಿಡಲ್ಪಡುವದಿಲ್ಲಾ.

8. ಖರೀದಿದಾರರು ಅವಶ್ಯವಿದ್ದರೆ ತೊಲೆಗಳನ್ನು ಪುನಹ ಅಳತೆ ಮಾಡಬಹುದು. ಆದರೆ ಮರ ಸಾಗಿಸಿದನಂತರ ಕಂಡುಬರುವ ವ್ಯತ್ಯಾಸಗಳನ್ನಾಗಲಿ ಅಥವಾ ಯಾವ ಸಂಗತಿಯಲ್ಲಾದರೂ ಅಂಥಾ ವ್ಯತ್ಯಾಸಗಳನ್ನ ಕುರಿತು ಸಮಾಧಾನ ಪಡಿಸಿದ್ದಲ್ಲವೆ ಡೆಪ್ಯೂಟಿ ಕನ್ಸರ್ವೇಟರ್ ಸಾಹೆಬರವರು ಒಪ್ಪಿಕೊಳ್ಳಲಿಕ್ಕಿಲ್ಲಾ. ಒಪ್ಪಿಕೊಂಡ ವ್ಯತ್ಯಾಸಗಳಲ್ಲಿ ಹೆಚ್ಚು ಬಂದರೆ ಅದಕ್ಕೆ ಸರಿಯಾಗುವ ವೊಬಲಗು ಕೊಡಲೂ ಯಾ ಕಡಿಮೆ ಬಂದಲ್ಲಿ ವಜಾ ಪಡಿಯಲೂ ದರಖಾಸ್ತುದಾರರು ಅರ್ಹರಾಗುತ್ತಾರೆ.

9. ತಪ್ಸೀಲು ಪಟ್ಟಿಗಳ ಮತ್ತು ಕಡಿಮೆ ವಿಷಯಗಳನ್ನು ಈ ಕೆಳಿಗೆ ಸೈ ಮಾಡಿರುವವರಿಗೆ ಬರೆದು ತರಿಸಿಕೊಳ್ಳಬಹುದು

ಸಿ. ಮೆಕ್ಕಾರ್ತಿ,
ಕೊಡಗು ಡೆಪ್ಯೂಟಿ ಕನ್ಸರ್ವೇಟರ್, ಮಡಿಕೇರಿ.

ಬೆಂಗಳೂರು ಡಿಸ್ಟ್ರಿಕ್ಟ್.

ಪ್ರಸಿದ್ಧ ಪತ್ರಿಕೆ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ :—ಕಾರ್ಕಾರಹಳ್ಳಿ ತಾಲ್ಲೂಕು ಉಯ್ಯಂಬಳ್ಳಿ ಹೋಬಳಿ ಮರಳೆ ಬೇಕುಪ್ಪೆ ಎಂಬ ಗ್ರಾಮವು ಕಂದಾಯದ ಬಾಕಿಗೋಸ್ಕರ ಕಾರ್ಕಾರಹಳ್ಳಿ ತಾಲ್ಲೂಕು ಕಛೇರಿ ಕಟ್ಟಡದಲ್ಲಿ 3—8—03ನೇ ತಾರೀಖಿನಲ್ಲಿ ಹರಾಜು ಮಾಡಲ್ಪಡುತ್ತೆಂದು 1903ನೇ ಜುಲೈ 2ನೇ ತಾರೀಖಿನ ಮೈಸೂರು ಗೆಜೆಟ್ II‌ನೇ ಭಾಗದಲ್ಲಿ ಘಾಯಿಷಾಗಿರುತ್ತೆ.

ಹೆಚ್. ಹೆಚ್. ಸ್ಪಾರ್ಕ್ಸ್,
ಡೆಪ್ಯುಟಿ ಕಮಿಷನರ್.

ಕೋಲಾರ ಡಿಸ್ಟ್ರಿಕ್ಟ್.

ನೋಟಿಸ್.

ತಾರೀಖು ಜೂ 1903ನೇ ಇಸವಿ.

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವದೇನಂದರೆ,—ಕೋಲಾರ ಭಂಗಾರಗಣಿಗೆ ನೀರು ಸರಬರಾಯಿ ಮಾಡತಕ್ಕ ಸಂಬಂಧ್ಧದಲ್ಲಿ ಬೇತಮಂಗಲದ ದೊಡ್ಡಕೆರೆ ಮತ್ತು ಅದರಲ್ಲಿ ಬೀಳತಕ್ಕ ಕ್ಷೀರನದಿ ಮತ್ತು ಕೋಲಾರ ತಾಲ್ಲೂಕು ದೊಡ್ಡಹೊಳಲಿಕೆರೆ ಇವುಗಳ ನೀರನ್ನ ಸಾಗುವಳಿಗೆ ಬಿಡದೆ ಅಮಾನತ್ತು ಮಾಡಬೇಕೆಂದು ಮೈಸೂರು ಸರ್ಕಾರದವರು ನಿಶ್ಚೈಸಿ ಹುಕುಂ ಮಾಡಿರುವ ಪ್ರಕಾರ ಬೇತಮಂಗಲದ ದೊಡ್ಡಕೆರೆಯನ್ನ ಇಂಜಿನಿಯರ್ ಇಲಾಖೆಯವರ ಸುಫರ್ದು ಮಾಡಿರುವ ಸಂಗತಿ ಮೊದಲೇ ಸಮಸ್ತ ಜನರಿಗೂ ಪ್ರಸಿದ್ಧಪಡಿಸಿರುತ್ತಷ್ಟೆ.

ಅದರಂತೆಯೇ, ಕೋಲಾರ ತಾಲ್ಲೂಕು ಹೊಳಲಿಕೆರೆ ಮತ್ತು ಹೊಳಲಿ ಮತ್ತು ಬೇತಮಂಗಲ ಗ್ರಾಮಗಳ ಮಧ್ಯೆ ಹರಿಯುವ ಕ್ಷೀರನದಿ ಇವುಗಳನ್ನ "Water Supply Department" ನವರ ಸುಫರ್ದು ಮಾಡಿರುತ್ತೆ.

ಮೇಲ್ಕಂಡ ದೊಡ್ಡಹೊಳಲಿಕೆರೆ ಮತ್ತು ಕ್ಷೀರನದಿ ನೀರು ಸಹ ಈ ಲಾಗಾಯತು ಸಾಗುವಳಿಗೆ ಕೊಡಲಾಗಲಾರದೆಂಬ ಸಂಗತಿ ಇದಕ್ಕೆ ಸಂಬಂಧಪಟ್ಟ ಸಮಸ್ತ ರೈತರು ಖಂಡಿತ ತಿಳಿಯುವದು.

ಈ ನೀರಿನಿಂದ ಇದುವರಿಗೆ ಸಾಗುವಳಿ ಆಗುತ್ತಿದ್ದ ತರಿ ಮತ್ತು ಬಾಗಾಯತು ಜಮೀನುಗಳಲ್ಲಿ ರೈತರು ಅವರು ಇಷ್ಟ ಪಡುವ ಖುಷ್ಕಿ ಬೆಳೆಯನ್ನ ಇಟ್ಟುಕೊಳ್ಳಲು ಸರ್ಕಾರದವರ ಅಡ್ಡಿ ಇರುವದಿಲ್ಲಾ.

ಈ ಜಮೀನುಗಳಲ್ಲಿ ಭಾವಿ ತಗೆದು ಆ ನೀರಿನಿಂದ ತರಿ ಮತ್ತು ಬಾಗಾಯತು ಸಾಗುವಳಿ ಮಾಡಿಕೊಳ್ಳಬೇಕೆಂತ ಇಷ್ಟವುಳ್ಳವರು ನಮ್ಮಲ್ಲಿ ದರಖಾಸ್ತು ಹಾಜರು ಮಾಡಿ ಹುಕುಂ ಪಡಿಯಬೇಕು. ಇದಕ್ಕೆ ತಪ್ಪಬಾರದು.

ಸ್ಥಿರಸ್ವತ್ತಿನ ಹರಾಜಿ ಬಗ್ಗೆ ಕೊಡಲ್ಪಟ್ಟ ಇಸ್ತಿಹಾರ್‌ವ ಪ್ರಸಿದ್ಧಪತ್ರಿಕೆ.

1. ಕಂದಾಯದ ಬಾಕೀದಾರರಾದ ಮದನಹಳ್ಳಿ ಗ್ರಾಮದ ರಾಮಭಟ್ಟ ವಗ್ಗೈರೇರಿಂದ ಬರಬೇಕಾದ ಜಮೀನ್ ಕಂದಾಯದ ಬಾಕೀಗಾಗಿ ಇದರಿಂದ ನಮೂದಾಗುವ ಸ್ಥಿರಸ್ವತ್ತು ಕೋಲಾರ ಡಿಸ್ಟ್ರಿಕ್ಟ್ ಕೋಲಾರ ತಾಲ್ಲೂಕು ಕಛೇರಿಯಲ್ಲಿ ಅಸಿಸ್ಟೆಂಟ್ ಕಮಿಷನರ್ ಅಥವಾ ಅಮಲ್ದಾರ್‌ರವರ ರೂಬರೂಬ್ 1903ನೇ ಇಸವಿ ಆಗಸ್ಟು 11ನೇ ತಾರೀಖಿನಲ್ಲಿ ಬಹಿರಂಗವಾದ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟ ಇಛೆ.

ಹರಾಜು ದಿವಿ 11 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ವಿಳದಂ ಚಡದರಖಾಸ್ತುದಾರನ ಹೆಸರಿಗೆ ನಿಲ್ಲಿಸಲ್ಪಡುತ್ತೆ.

2. ಸದರೀ ಸ್ವತ್ತಿಗಾಗಿ ಹರಾಜುದಾರನು 1903ನೇ ಸಾಲಿಗೆ ಪೂರ್ತಿಯಾಗಿ * ಪಾವತಿ ಮಾಡಬೇಕಾದ ಕಂದಾಯದ ಮೊಬಲಗು ಇದರಿಂದ ಕಾಣಿಸಿರುವ ತಖ್ತೆಯಲ್ಲಿ ನಮೂದಿಸಿರುವ ತಖ್ಮೀಲ್ ಮೇರಿಗೆ 57—12—0 ರೂಪಾಯಿ ಆಗಿರುತ್ತೆ.

3. ಹರಾಜು ಕಾಲದಲ್ಲಿ ಹರಾಜ್‌ದಾರನು ಹರಾಜ್ ಮೊಬಲಗಿನ ಶೇಕಡಾ 25 ರೂಪಾಯನ್ನ ಡಿಪಾಜಿಟ್ಟು ಹಾಜರ್ಮಾಡಬೇಕಾಗಿರುತ್ತೆ. ಅದು ಜಾತಾ ಹರಾಜು ಬಾಬತು ಬಾಕೀ ಮೊಬಲಗು ಹರಾಜು ತಾರೀಖು ಲಾಗಾಯಿತು 15 ದಿವಸಗಳಲ್ಲಿ ಪಾವತಿ ಮಾಡಲ್ಪಡದೇ ಹೋದಲ್ಲಿ ಮೇಲೆ ಹೇಳಿದ ಡಿಪಾಜಿಟ್ಟು ಮೊಬಲಗನ್ನ ಹಾಜರ್ಮಾಡಿದವನು ಕಳದುಕೊಳ್ಳಲು ಗುರಿಯಾಗುತ್ತಾನೆ.

4. ಅಂಥಾ ಡಿಪಾಜಿಟ್ಟು ಮೊಬಲಗು ಹಾಜರ್ಮಾಡಲ್ಪಡದೆ ಯಾ ಹರಾಜು ಬಾಬತು ಬಾಕಿ ಮೊಬಲಗು ಪಾವತಿ ಮಾಡಲ್ಪಡದೇ ಹೋದಾಗ್ಯೆ ಸದರೀ ಸ್ವತ್ತು ಮೊದಲು ಹರಾಜುದಾರನ ಖರ್ಚಿನಿಂದಲೂ ಮತ್ತು ಅಪಸ್ಸಿಗೆ ಅದರಿಂದ ಉಂಟಾಗಬಹುದಾದ ನಷ್ಟಕ್ಕೆ ಗುರಿಪಡಿಸಿಯೂ ಪುನಃ ಹರಾಜು ಮಾಡಲ್ಪಡುತ್ತೆ.

5. ಹರಾಜಿನಲ್ಲಿ ಸವಾಲ್ ಮಾಡತಕ್ಕ ಜನಗಳು ಖುದ್ದು ತಮ್ಮ ಸ್ವಂತಕ್ಕೋಸ್ಕರ ಸವಾಲ್ ಮಾಡುತ್ತಾರೆಯೇ ಯಾ ಏಜಂಟು ಯಾ ಮುತಾಲೀಕರಾಗಿ ಸವಾಲ್ ಮಾಡುತ್ತಾರೆಯೇ ಎಂಬ ಅಂಶವನ್ನ ತಿಳಿಸಬೇಕೆಂತಲೂ, ಇತರರಿಗೋಸ್ಕರ ಮುತಾಲೀಕರಾಗಿ ಸವಾಲ್ ಮಾಡುವ ಸಂದರ್ಭದಲ್ಲಿ ಅಂಥಾ ತಮ್ಮ ಯಜಮಾನರಿಂದ ಸಹಿ ಮಾಡಲ್ಪಟ್ಟ ಲಿಖಿತವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡುವಂತೆಯೂ ಕೇಳಲ್ಪಡಬಹುದು. ಅದನ್ನ ಅವರು ಹಾಜರ್ಮಾಡದೆ ಹೋದಲ್ಲಿ ಅವರ ಸವಾಲುಗಳು ತಿರಸ್ಕರಿಸಲ್ಪಡಬಹುದು.

6. ಹರಾಜಿನಲ್ಲಿ ಸ್ವತ್ತು ಯಾರ ಹೆಸರಿಗಾದರೂ ನಿಲ್ಲಿಸಲ್ಪಡುವದಕ್ಕೆ ಮುಂಚಿತವಾಗಿ, ಬಾಕೀದಾರನಾಗಲೀ ಆತನ ತರಫಿನವನಾಗಿ ಪ್ರವರ್ತಿಸುವ ಯಾ ಸದರೀ ಸ್ವತ್ತಿನಲ್ಲಿ ಬಾಧ್ಯತೆ ಇರುತ್ತೆಂದು ಹೇಳುವ ಯಾವ ಇತರ ಮನುಷ್ಯನೇ ಆಗಲೀ ಬಾಕೀಯಲ್ಲಿ ಬಂದಿರುವ ಪೂರಾ ಕಂದಾಯದ ಹಣವನ್ನೂ ಬಡ್ಡಿ ಮತ್ತು ಇತರ ಖರ್ಚುಗಳ ಸಮೇತ ಹಾಜರ್ಮಾಡುವ ಪರ್ಯಂತಕ್ಕೆ ಹರಾಜು ನಿಲ್ಲಿಸಲ್ಪಡುತ್ತೆ.

7. ಹರಾಜು ಡೆಪ್ಯುಟಿ ಕಮಿಷನರವರಿಂದ ಮಂಜೂರ್ಮಾಡಲ್ಪಡುವ ತನಕ ಸ್ವತ್ತಿನ ಹರಾಜು ಪೂರ್ತಿಯಾಗುವದಿಲ್ಲ.

8. ಹರಾಜಿನಲ್ಲಿ ತೆಗದುಕೊಂಡವರು ಹರಾಜ್ ಮೊಬಲಗನ್ನ ಪೂರ್ತಿಯಾಗಿ ಪಾವತಿ ಮಾಡಿದ ಮೇಲೆ ಡೆಪ್ಯುಟಿ ಕಮಿಷನರವರಿಂದ ಹರಾಜು ಮಂಜೂರ್ಮಾಡಲ್ಪಟ್ಟಕೂಡ್ಲೆ, ಹರಾಜುದಾರು ಸದರೀ ಸ್ವತ್ತಿನ ಸ್ವಾಧೀನವನ್ನ ಹೊಂದುವರು. ಮತ್ತು ಸದರೀ ಸ್ವತ್ತು ಹರಾಜುದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು ಡೆಪ್ಯುಟಿ ಕಮಿಷನರವರಿಂದ ಸೈ ಮೊಹರ್ ಮಾಡಲ್ಪಟ್ಟ ಬಂದು ಹರಾಜ್ ಸರಟಿಫಿಕೇಟ್ ಆತನಿಗೆ ಕೊಡಲ್ಪಡುವದು. ಸ್ವತ್ತಿನ ವಿವರಣೆಯಲ್ಲಿಯೂ ಯಾ ವಿಸ್ತೀರ್ಣದಲ್ಲಿಯೂ ಇರುವ ಸಕ್ಕ ಲಿತ್ಯಗಳಿಗೆ ಗವರ್ಮೆಂಟಿನವರು ಜವಾಬ್ದಾರರಲ್ಲವೆಂಬ ಅಂಶವನ್ನ ಸ್ಪಷ್ಟವಾಗಿ ತಿಳಿದಿರತಕ್ಕದ್ದು.

9. ಹರಾಜಿನಿಂದ ತಮಗೆ ನಷ್ಟ ಉಂಟಾಯಿತೆಂದು ಎಣಿಸುವ ಜನಗಳು ಹರಾಜ್ ತಾರೀಖು ಲಾಗಾಯತು 30 ದಿವಸಗಳಲ್ಲಿ ಡೆಪ್ಯುಟಿ ಕಮಿಷನರವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಮತ್ತು ಅವರ ಹುಕುಮಿನ ಮೇಲೆ ಕರ್ನೂನಿಂದ ವಿಧಿಸಲ್ಪಟ್ಟ ವಾಯಿದೆಯಲ್ಲಿ ಗವರ್ಮೆಂಟಿನವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಸ್ವತಂತ್ರರಾಗಿರುತ್ತಾರೆ. ಸ್ವತ್ತಿನ ವಿಕ್ರಯವು ಅಂಥಾ ಅಪ್ಪೀಲಿನಲ್ಲಿ ಆಗುವ ಫೈಸಲ್ ಹುಕುಮಿಗೆ ಬದ್ಧವಾಗಿರತಕ್ಕದ್ದು :—

ತಾಲ್ಲೂಕು.	ಹೋಬಳಿ.	ಗ್ರಾಮ.	ಬಾಕೀದಾರ ಹೆಸರು.	ಸ್ವತ್ತಿನ ತಪ್ಸೀಲ್. ಕಟ್ಟಡಗಳು. ಕಟ್ಟಿಸಿದ ಹೆಸರು.	ಅಂದಾಜು ಕಿಮ್ಮತ್ತು. ರೂ. ಆ. ಪೈ.	ಜಮೀನು. ನಂಬರ್ ಅಥವಾ ಜಮೀನಿನ ಹೆಸರು.	ಖುಷ್ಕಿ, ತರೀ ಅಥವಾ ನಾ ಬಾಗಾಯತು.	ವಿಸ್ತೀರ್ಣ. ಎ. ಗು.	ಅಕಾರ. ರೂ. ಆ. ಪೈ.	ಸರ್ಕಾರಕ್ಕೆ ಬರಬೇಕಾದ ನೋಟಿಸ್ ಫೀ ವಗೈರೆ ಸಹಿತವಾದ ಬಾಕಿ ಮೊಬಲಗು. ರೂ. ಆ. ಪೈ.	
ಕೋಲಾರ	ನಗರಪೂರ	ಕಾಯಂಗೆನತ್ತಾ ರಾಮಾಪುರ	ಮದನಹಳ್ಳಿ ರಾಮಚಟ್ಟಿ ವಗೈರೆ	...	...	..	ಪರಂಪೋಕು ಖುಷ್ಕಿ ತರಿ	64 12 94 27 5 16	2 0 0 30 0 0 10 8 0	8 15 0 15 15 0 15 15 0	ವಿಕಾರಿ ಶಾರ್ವರಿ ಪ್ಲವ
								164 15	42 8 0	15 15 0	ಶುಭಕೃತು
										56 12 0	
				ಪೂರ್ವಕ್ಕೆ — ಮದನಹಳ್ಳಿ ಸರಹದ್ದು						0 8 0	ನೋಟಿಸ್ ಫೀ
				ಪಶ್ಚಿಮಕ್ಕೆ — ಜೋಡಿ ಜಂಬೂಪುರ ಸರಹದ್ದು						0 8 0	ಇಸ್ತಿಹಾರ್
				ಉತ್ತರಕ್ಕೆ — ಮದನಹಳ್ಳಿ ಸರಹದ್ದು							
				ದಕ್ಷಿಣಕ್ಕೆ — ಜೋಡಿ ಜಂಬೂಪುರ, ಶೀತಪ್ಪನಹಳ್ಳಿ ಸರಹದ್ದು							
				ಈ ಮಧ್ಯೆ ಇರುವ						57 12 0	

* ಯಾ ಬಾಕಿ ಇರುವ ಮಟ್ಟಿಗೆ ಸಂದರ್ಭಾನುಸಾರ ನಮೂದಿಸತಕ್ಕದ್ದು.

ಸ್ಥಿರಸ್ವತ್ತಿನ ಹರಾಜ್ ಬಗ್ಗೆ ಕೊಡಲ್ಪಟ್ಟ ಇಸ್ತಿಹಾರ್ ವ ಪ್ರಸಿದ್ಧಪತ್ರಿಕೆ.

ತಾರೀಖು 2ನೇ ಜುಲೈ 1903.

1. ಕಂದಾಯದ ಬಾಕೀದಾರನಾದ ಜಂಗಂಕೋಟೆ ಗ್ರಾಮದ ರಂಗರಾವ್‌ನಿಂದ ಬರಬೇಕಾದ ಜಮ್ಮಾ ಕಂದಾಯದ ಬಾಕೀಗಾಗಿ ಇದರಡೀ ನಮೂದಾಗುವ ಸ್ಥಿರಸ್ವತ್ತು ಕೋಲಾರ ಡಿಸ್ಟ್ರಿಕ್ಟ್ ಶಿಡ್ಲಘಟ್ಟ ತಾಲ್ಲೂಕು ಕಳವೇರಿಯಲ್ಲಿ 1903ನೇ ಇಸವಿ ಸೆಪ್ಟಂಬರ್ 1ನೇ ತಾರೀಖಿನಲ್ಲಿ ಬಹಿರಂಗವಾದ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟಿದೆ.

ಹರಾಜು ದಿವಿ 11 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ಏಕದಂ ಚಡದರಖಾಸ್ತುದಾರನ ಹೆಸರಿಗೆ ನಿಲ್ಲಿಸಲ್ಪಡುತ್ತೆ.

2. ಸದರೀ ಸ್ವತ್ತಿಗಾಗಿ ಹರಾಜುದಾರನು 1902–1903ನೇ ಸಾಲಿಗೆ ಪೂರ್ತಿಯಾಗಿ * ಪಾವತಿ ಮಾಡಬೇಕಾದ ಕಂದಾಯದ ಮೊಬಲಗು ಇದರಡಿ ಕಾಣಿಸಿರುವ ತಖ್ತೆಯಲ್ಲಿ ನಮೂದಿಸಿರುವ ತಖ್ತೀಲ್ ಮೇರಿಗೆ 54—2—3 ರೂಪಾಯಿ ಆಗಿರುತ್ತೆ.

3. ಹರಾಜು ಕಾಲದಲ್ಲಿ ಹರಾಜುದಾರನು ಹರಾಜು ಮೊಬಲಗಿನ ಶೇಕಡಾ 25 ರೂಪಾಯನ್ನು ಡಿಪಾಜಿಟ್ ಹಾಜರ್ಮಾಡಬೇಕಾಗಿರುತ್ತೆ. ಅದು ಜಾತಾ ಹರಾಜು ಬಾಬತು ಬಾಕಿ ಮೊಬಲಗು ಹರಾಜು ತಾರೀಖು ಲಾಗಾಯತು 15 ದಿವಸಗಳಲ್ಲಿ ಪಾವತಿ ಮಾಡಲ್ಪಡದೇ ಹೋದಲ್ಲಿ ಮೇಲೆ ಹೇಳಿದ ಡಿಪಾಜಿಟ್ಟು ಮೊಬಲಗನ್ನ ಹಾಜರ್ಮಾಡಿದವನು ಕಳದುಕೊಳ್ಳಲು ಗುರಿಯಾಗುತ್ತಾನೆ.

4. ಅಂಥಾ ಡಿಪಾಜಿಟ್ಟು ಮೊಬಲಗು ಹಾಜರ್ಮಾಡಲ್ಪಡದೆ ಯಾ ಹರಾಜು ಬಾಬತು ಬಾಕಿ ಮೊಬಲಗು ಪಾವತಿ ಮಾಡಲ್ಪಡದೇ ಹೋದಾಗ್ಯೆ ಸದರೀ ಸ್ವತ್ತು ಮೊದಲು ಹರಾಜುದಾರನ ಖರ್ಚಿನಿಂದಲೂ ಮತ್ತು ಅವನಿಗೆ ಅದರಿಂದ ಉಂಟಾಗಬಹುದಾದ ನಷ್ಟಕ್ಕೆ ಗುರಿಪಡಿಸಿಯೂ ಪುನಃ ಹರಾಜು ಮಾಡಲ್ಪಡುತ್ತೆ.

5. ಹರಾಜಿನಲ್ಲಿ ಸವಾಲ್ ಮಾಡತಕ್ಕ ಜನಗಳು ಖುದ್ದು ತಮ್ಮ ಸ್ವಂತಕ್ಕೋಸ್ಕರ ಸವಾಲ್ ಮಾಡುತ್ತಾರೆಯೇ ಯಾ ಏಜಂಟು ಯಾ ಮುತಾಲೀಕರಾಗಿ ಸವಾಲ್ ಮಾಡುತ್ತಾರೆಯೇ ಎಂಬ ಅಂಶವನ್ನ ತಿಳಿಸಬೇಕೆಂತಲೂ ಇತರರಿಗೋಸ್ಕರ ಮುತಾಲೀಕರಾಗಿ ಸವಾಲ್ ಮಾಡುವ ಸಂದರ್ಭದಲ್ಲಿ ಅಂಥಾ ತಮ್ಮ ಯಜಮಾನರಿಂದ ಸಹಿ ಮಾಡಲ್ಪಟ್ಟ ಲಿಖಿತವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡುವಂತೆಯೂ ಕೇಳಲ್ಪಡಬಹುದು. ಅದನ್ನ ಅವರು ಹಾಜರ್ಮಾಡದೆ ಹೋದಲ್ಲಿ ಅವರ ಸವಾಲುಗಳು ತಿರಸ್ಕರಿಸಲ್ಪಡಬಹುದು.

6. ಹರಾಜಿನಲ್ಲಿ ಸ್ವತ್ತು ಯಾರ ಹೆಸರಿಗಾದರೂ ನಿಲ್ಲಿಸಲ್ಪಡುವದಕ್ಕೆ ಮುಂಚಿತವಾಗಿ, ಬಾಕೀದಾರನಾಗಲೀ ಆತನ ತರಫನವನಾಗಿ ಪ್ರವರ್ತಿಸುವ ಯಾ ಸದರೀ ಸ್ವತ್ತಿನಲ್ಲಿ ಬಾಧ್ಯತೆ ಇರುತ್ತೆಂದು ಹೇಳುವ ಯಾವ ಇತರ ಮನುಷ್ಯನೇ ಆಗಲೀ ಬಾಕಿಯಲ್ಲಿ ಬಂದಿರುವ ಪೂರಾ ಕಂದಾಯದ ಹಣವನ್ನು ಬಡ್ಡಿ ಮತ್ತು ಇತರ ಖರ್ಚುಗಳ ಸಮೇತ ಹಾಜರ್ಮಾಡುವ ಪಕ್ಷಕ್ಕೆ ಹರಾಜು ನಿಲ್ಲಿಸಲ್ಪಡುತ್ತೆ.

7. ಹರಾಜು ಡೆಪ್ಯೂಟಿ ಕಮಿಷನರವರಿಂದ ಮಂಜೂರ್ಮಾಡಲ್ಪಡುವ ತನಕ ಸ್ವತ್ತಿನ ಹರಾಜು ಪೂರ್ತಿಯಾಗುವದಿಲ್ಲ.

8. ಹರಾಜಿನಲ್ಲಿ ತೆಗದುಕೊಂಡವರು ಹರಾಜ್ ಮೊಬಲಗನ್ನ ಪೂರ್ತಿಯಾಗಿ ಪಾವತಿ ಮಾಡಿದ ಮೇಲೆ ಡೆಪ್ಯೂಟಿ ಕಮಿಷನರವರಿಂದ ಹರಾಜು ಮಂಜೂರ್ಮಾಡಲ್ಪಟ್ಟ ಕೂಡ್ಲೆ, ಹರಾಜುದಾರ್ರು ಸದರೀ ಸ್ವತ್ತಿನ ಸ್ವಾಧೀನವನ್ನ ಹೊಂದುವರು. ಮತ್ತು ಸದರೀ ಸ್ವತ್ತು ಹರಾಜುದಾರನ ಹೆಸರಿನಲ್ಲಿ ರಿಜಸ್ಟರ್ ಮಾಡಲ್ಪಟ್ಟು ಡೆಪ್ಯೂಟಿ ಕಮಿಷನರವರಿಂದ ಸೈ ಮೊಹರ್ ಮಾಡಲ್ಪಟ್ಟ ಬಂದು ಹರಾಜ್ ಸರಟಿಫಿಕೇಟ್ ಆತನಿಗೆ ಕೊಡಲ್ಪಡುವದು. ಸ್ವತ್ತಿನ ವಿವರಣೆಯಲ್ಲಿಯೂ ಯಾ ವಿಸ್ತೀರ್ಣದಲ್ಲಿಯೂ ಇರುವ ಸ್ಕಲಿತ್ಯಗಳಿಗೆ ಗವರ್ಮೆಂಟಿನವರು ಜವಾಬುದಾರ್ರಲ್ಲವೆಂಬ ಅಂಶವನ್ನ ಸ್ಪಷ್ಟವಾಗಿ ತಿಳಿದಿರತಕ್ಕದ್ದು.

9. ಹರಾಜಿನಿಂದ ತಮಿಗೆ ನಷ್ಟ ಉಂಟಾಯಿತೆಂದು ಎಣಿಸುವ ಜನಗಳು ಹರಾಜ್ ತಾರೀಖು ಲಾಗಾಯತು 30 ದಿವಸಗಳಲ್ಲಿ ಡೆಪ್ಯೂಟಿ ಕಮಿಷನರವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಮತ್ತು ಅವರ ಹುಕುಮಿನ ಮೇಲೆ ಕಾರ್ಯ್ನಿಂದ ವಿಧಿಸಲ್ಪಟ್ಟ ವಾಯಿದೆಯಲ್ಲಿ ಗವರ್ಮೆಂಟಿನವರಿಗೆ ಅಪ್ಪೀಲ್ ಮಾಡಿಕೊಳ್ಳವದಕ್ಕೂ ಸ್ವತಂತ್ರರಾಗಿರುತ್ತಾರೆ. ಸ್ವತ್ತಿನ ವಿಕ್ರಯವು ಅಂಥಾ ಅಪ್ಪೀಲಿನಲ್ಲಿ ಆಗುವ ಫೈಸಲ್ ಹುಕುಮಿಗೆ ಬದ್ಧವಾಗಿರತಕ್ಕದ್ದು:—

ತಾಲ್ಲೂಕು.	ಹೋಬಳಿ.	ಗ್ರಾಮ.	ಬಾಕೀದಾರನ ಹೆಸರು.	ಸ್ವತ್ತಿನ ತಖ್ತೀಲ್. ಕಟ್ಟಡಗಳು. ತಖ್ತೀಲಿನ ಹೆಸರು.	ಕಟ್ಟಡಗಳು. ಅಂದಾಜು ಕಿಮ್ಮತ್ತು.	ಜಮೀನು. ನಂಬರ್ ಅಥವಾ ಜಮೀನಿನ ಹೆಸರು.	ಜಮೀನು. ಖುಷ್ಕಿ ತರೀ ಅಥವಾ ಬಾಗಾಯತು.	ಜಮೀನು. ವಿಸ್ತೀರ್ಣ.	ಜಮೀನು. ಅಕಾರ.	ಸರಕಾರಕ್ಕೆ ಬರಬೇಕಾದ ಸೇನೆ ಟೈಸಿಫ್ ಪೈಸೆಗಳ ಸಹಿತವಾದ ಬಾಕಿ ಮೊಬಲಗು.
ಚಿಕ್ಕನಾಯಕನಹಳ್ಳಿ	ಜಂಗಂಕೋಟೆ	ಪಾ|| ಕಾಯನಸ್ಸರ	ರಂಗರಾವ್	...	..				ರೂ. ಆ. ಪೈ. 54— 2—3

ಕಾಯುಂಗುತ್ತಾ ಕೆರಿಯನಪುರ ಗ್ರಾಮಕ್ಕೆ ಚಕ್ಕು ಬಂದಿ.-
ಪೂರ್ವಕ್ಕೆ —ಮರಟಿ ಅಗ್ರಹಾರದ ಎಲ್ಲೆ.
ಪಶ್ಚಿಮಕ್ಕೆ —ತಿಮ್ಮಸಂದ್ರ ಮತ್ತು ಜೋಡಿ ಹಾರಡಿ ಎಲ್ಲೆ.
ಉತ್ತರಕ್ಕೆ —ಅಮರಾವತಿ ಎಲ್ಲೆ.
ದಕ್ಷಿಣಕ್ಕೆ —ಕುಂಭಿಗಾನಹಳ್ಳಿ ಎಲ್ಲೆ.
ಈ ಮಧ್ಯೆ ಇರತಕ್ಕ ಪೂರಾ ಗ್ರಾಮ ಜಾರಿ ಚಿಲ್ಲರೆ ಇನಾಂತಿ ಶಿವಾಯ್.

	ಎ.	ಗು.	ರೂ.	ಆ.	ಪೈ.
ಪರಂಪೋಕು ...	23	30	0	4	0
ಖುಷ್ಕಿ ...	297	14	136	7	0
ಬಾಗಾಯತು ...	10	9	53	4	0
	331	13	189	15	0

ಜಂಗಂಕೋಟೆ ಹೋ|| ಕಾಯನಸ್ಸರ ಗ್ರಾಮಕ್ಕೆ— ಖುಷ್ಕಿ ಜಮೀನು ಸಾಲ್ ಬಾಕಿ ನೋಟಿಸ್ ಫೀ ಪೈಸೆ

	ರೂ.	ಆ.	ಪೈ.
	52	10	0
...	1	8	0
...			
	54	2	0

* ಯಾ ಬಾಕೀ ಇರುವ ಮಟ್ಟಿಗೆ ಸಂದರ್ಭಾನುಸಾರ ನಮೂದಿಸತಕ್ಕದ್ದು.

ಸ್ಥಿರಸ್ವತ್ತಿನ ಹರಾಜ್ ಬಗ್ಗೆ ಕೊಡಲ್ಪಟ್ಟ ಇಸ್ತಿಹಾರ್ ನ ಪ್ರಸಿದ್ಧಪತ್ರಿಕೆ.

ತಾರೀಖು 2ನೇ ಜುಲೈ 1903.

1. ಕಂದಾಯದ ಬಾಕೀದಾರರಾದ ಜಂಗಂಕೋಟೆ ಗ್ರಾಮದ ರಂಗರಾವ್, ಕೃಷ್ಣಪ್ಪನಿಂದ ಬರಬೇಕಾದ ಜಮೀನ್ ಕಂದಾಯದ ಬಾಕೀಗಾಗಿ ಇದರಡಿ ನಮೂದಾಗುವ ಸ್ಥಿರಸ್ವತ್ತು ಕೋಲಾರ ಡಿಸ್ಟ್ರಿಕ್ಟು ಶಿಡ್ಲಘಟ್ಟ ತಾಲ್ಲೂಕು ಕಳ್ಳೇರಿಯಲ್ಲಿ 1903ನೇ ಇಸವಿ ಸಪ್ಟಂಬರ್ 1ನೇ ತಾರೀಖಿನಲ್ಲಿ ಬಹಿರಂಗವಾದ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟಿದೆ.

ಹರಾಜು ದಿವಿ 11 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ಏಕದಂ ಚಡದರಖಾಸ್ತುದಾರನ ಹೆಸರಿಗೆ ನಿಲ್ಲಿಸಲ್ಪಡುತ್ತೆ.

2. ಸದರೀ ಸ್ವತ್ತಿಗಾಗಿ ಹರಾಜುದಾರನು 1902–1903ನೇ ಸಾಲ್ ವರಿಗೆ ಪೂರ್ತಿಯಾಗಿ * ಪಾವತಿ ಮಾಡಬೇಕಾದ ಕಂದಾಯದ ಮೊಬಲಗು ಇದರಡಿ ಕಾಣಿಸಿರುವ ತಖ್ತೆಯಲ್ಲಿ ನಮೂದಿಸಿರುವ ತಪ್ಶೀಲ್ ಮೇರಿಗೆ 66—10—8 ರೂಪಾಯಿ ಆಗಿರುತ್ತೆ.

3. ಹರಾಜು ಕಾಲದಲ್ಲಿ ಹರಾಜ್‌ದಾರನು ಹರಾಜ್ ಮೊಬಲಗಿನ ಶೇಕಡಾ 25 ರೂಪಾಯನ್ನು ಡಿಪಾಜಿಟ್ಟು ಹಾಜರ್ಮಾಡಬೇಕಾಗಿರುತ್ತೆ. ಅದು ಜಾತಾ ಹರಾಜು ಬಾಬತು ಬಾಕೀ ಮೊಬಲಗು ಹರಾಜ್ ತಾರೀಖು ಲಾಗಾಯಿತು 15 ದಿವಸಗಳಲ್ಲಿ ಪಾವತೀ ಮಾಡದೇ ಹೋದಲ್ಲಿ ಮೇಲೆ ಹೇಳಿದ ಡಿಪಾಜಿಟ್ಟು ಮೊಬಲಗನ್ನ ಹಾಜರ್ಮಾಡಿದವನು ಕಳದುಕೊಳ್ಳಲು ಗುರಿಯಾಗುತ್ತಾನೆ.

4. ಅಂಥಾ ಡಿಪಾಜಿಟ್ಟು ಮೊಬಲಗು ಹಾಜರ್ಮಾಡಲ್ಪಡದೆ ಯಾ ಹರಾಜು ಬಾಬತು ಬಾಕೀ ಮೊಬಲಗು ಪಾವತೀ ಮಾಡಲ್ಪಡದೇ ಹೋದಾಗ್ಯೆ ಸದರೀ ಸ್ವತ್ತು ಮೊದಲು ಹರಾಜುದಾರನ ಖರ್ಚಿನಿಂದಲೂ ಮತ್ತು ಅವನಿಗೆ ಅದರಿಂದ ಉಂಟಾಗಬಹುದಾದ ನಷ್ಟಕ್ಕೆ ಗುರಿಪಡಿಸಿಯೂ ಪುನಃ ಹರಾಜು ಮಾಡಲ್ಪಡುತ್ತೆ.

5. ಹರಾಜಿನಲ್ಲಿ ಸವಾಲ್ ಮಾಡತಕ್ಕ ಜನಗಳು ಖುದ್ದು ತಮ್ಮ ಸ್ವಂತಕ್ಕೋಸ್ಕರ ಸವಾಲ್ ಮಾಡುತ್ತಾರೆಯೇ ಯಾ ವಿಜಂಟು ಯಾ ಮುತಾಲೀಕರಾಗಿ ಸವಾಲ್ ಮಾಡುತ್ತಾರೆಯೇ ಎಂಬ ಅಂಶವನ್ನ ತಿಳಿಸಬೇಕೆಂತಲೂ, ಇತರರಿಗೋಸ್ಕರ ಮುತಾಲೀಕರಾಗಿ ಸವಾಲ್ ಮಾಡುವ ಸಂದರ್ಭದಲ್ಲಿ ಅಂಥಾ ತಮ್ಮ ಯಜಮಾನರಿಂದ ಸಹಿ ಮಾಡಲ್ಪಟ್ಟ ಲಿಖಿತವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡುವಂತೆಯೂ ಕೇಳಿಲ್ಪಡಬಹುದು. ಅದನ್ನ ಅವರು ಹಾಜರ್ಮಾಡದೆ ಹೋದಲ್ಲಿ ಅವರ ಸವಾಲುಗಳು ತಿರಸ್ಕರಿಸಲ್ಪಡಬಹುದು.

6. ಹರಾಜಿನಲ್ಲಿ ಸ್ವತ್ತು ಯಾರ ಹೆಸರಿಗಾದರೂ ನಿಲ್ಲಿಸಲ್ಪಡುವದಕ್ಕೆ ಮುಂಚಿತವಾಗಿ, ಬಾಕೀದಾರನಾಗಲೀ ಆತನ ತರಫಿನವನಾಗಿ ಪ್ರವರ್ತಿಸುವ ಯಾ ಸದರೀ ಸ್ವತ್ತಿನಲ್ಲಿ ಬಾಧ್ಯತೆ ಇರುತ್ತೆಂದು ಹೇಳುವ ಯಾವ ಇತರ ಮನುಷ್ಯನೇ ಆಗಲೀ ಬಾಕಿಯಲ್ಲಿ ಬಂದಿರುವ ಪೂರಾ ಕಂದಾಯದ ಹಣವನ್ನೂ, ಬಡ್ಡಿ ಮತ್ತು ಇತರ ಖರ್ಚುಗಳ ಸಮೇತ ಹಾಜರ್ಮಾಡುವ ಪಕ್ಷಕ್ಕೆ ಹರಾಜು ನಿಲ್ಲಿಸಲ್ಪಡುತ್ತೆ.

7. ಹರಾಜು ಡಿಪ್ಯೂಟಿ ಕಮಿಷನರವರಿಂದ ಮಂಜೂರ್ಮಾಡಲ್ಪಡುವ ತನಕ ಸ್ವತ್ತಿನ ಹರಾಜು ಪೂರ್ತಿಯಾಗುವದಿಲ್ಲ.

8. ಹರಾಜಿನಲ್ಲಿ ತೆಗದುಕೊಂಡವರು ಹರಾಜ್ ಮೊಬಲಗನ್ನ ಪೂರ್ತಿಯಾಗಿ ಪಾವತಿ ಮಾಡಿದ ಮೇಲೆ ಡಿಪ್ಯೂಟಿ ಕಮಿಷನರವರಿಂದ ಹರಾಜು ಮಂಜೂರ್ಮಾಡಲ್ಪಟ್ಟ ಕೂಡ್ಲೆ, ಹರಾಜುದಾರು ಸದರೀ ಸ್ವತ್ತಿನ ಸ್ವಾಧೀನವನ್ನ ಹೊಂದುವರು. ಮತ್ತು ಸದರೀ ಸ್ವತ್ತು ಹರಾಜುದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು ಡೆಪ್ಯೂಟಿ ಕಮಿಷನರವರಿಂದ ಸೈಕ್ ಮೊಹರ್ ಮಾಡಲ್ಪಟ್ಟ ಬಂದು ಹರಾಜ್ ಸರಟಿಫಿಕೇಟ್ ಆತನಿಗೆ ಕೊಡಲ್ಪಡುವದು. ಸ್ವತ್ತಿನ ವಿವರಣೆಯಲ್ಲಿಯೂ ಯಾ ವಿಸ್ತೀರ್ಣದಲ್ಲಿಯೂ ಇರುವ ಸ್ಖಲಿತ್ಯಗಳಿಗೆ ಗವರ್ಮೆಂಟಿನವರು ಜವಾಬ್ದಾರ್ರಲ್ಲವೆಂಬ ಅಂಶವನ್ನ ಸ್ಪಷ್ಟವಾಗಿ ತಿಳಿದಿರತಕ್ಕದ್ದು.

9. ಹರಾಜಿನಿಂದ ತಮಿಗೆ ನಷ್ಟ ಉಂಟಾಯಿತೆಂದು ಎಣಿಸುವ ಜನಗಳು ಹರಾಜು ತಾರೀಖು ಲಾಗಾಯತು 30 ದಿವಸಗಳಲ್ಲಿ ಡಿಪ್ಯೂಟಿ ಕಮ್ಮಿಷನರವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಮತ್ತು ಅವರ ಹುಕುಮಿನಮೇಲೆ ಕಾನೂನಿನಿಂದ ವಿಧಿಸಲ್ಪಟ್ಟ ವಾಯಿದೆಯಲ್ಲಿ ಗವರ್ಮೆಂಟಿನವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಸ್ವತಂತ್ರರಾಗಿರುತ್ತಾರೆ. ಸ್ವತ್ತಿನ ವಿಕ್ರಯವು ಅಂಥಾ ಅಪ್ಪೀಲಿನಲ್ಲಿ ಆಗುವ ಫೈಸಲ ಹುಕುಮಿಗೆ ಬದ್ಧವಾಗಿರತಕ್ಕದ್ದು :—

ತಾಲ್ಲೂಕು.	ಹೋಬಳಿ.	ಗ್ರಾಮದ.	ಬಾಕೀದಾರರ ಹೆಸರು.	ಸ್ವತ್ತಿನ ತಪ್ಶೀಲ್. ಕಟ್ಟಡಗಳು. ಸ್ವತ್ತಿನ ಹೆಸರು.	ಅಂದಾಜು ಕಿಮ್ಮತ್ತು.	ಜಮೀನು. ನಂಬರ್ ಖಷ್ಕಾ ಪಟ್ಟಿಯಾನಿನ ಹೆಸರು.	ಖುಷ್ಕಿ, ತರೀ ಅಥವಾ ಬಾಗಾಯತು.	ವಿಸ್ತೀರ್ಣ.	ಅಕಾರ.	ಸರ್ಕಾರಕ್ಕೆ ಬರಬೇಕಾದ ನೋಟಿಸ್ ಫೀ ವಗೈರೆ ಸಹಿತವಾದ ಬಾಕೀ ಮೊಬಲಗು.
					ರೂ. ಆ. ಪೈ.					
ಶಿಡ್ಲಘಟ್ಟ	ಬಾರಿಂಗ ಪೇಟೆ	ಕಾಯಂಗುತ್ತಾ ಚಿಕ್ಕಬಲ್ಲ	ರಂಗರಾವ್, ಕೃಷ್ಣಪ್ಪನ	...	....	ಕಾಯಗುತ್ತಾ ಚಿಕ್ಕ ಬಲ್ಲ ಗ್ರಾಮಕ್ಕೆ ಚಕ್ಕುಬಂದಿ. ಪೂರ್ವಕ್ಕೆ —ಕಾಯಂಗುತ್ತಾ ಫಕೀರನ ಹೊಸಹಳ್ಳಿ ಸರಹದ್ದು. ಪಶ್ಚಿಮಕ್ಕೆ —ಜಂಗಂಕೋಟೆ ಮತ್ತು ಕುಮಬರಹಳ್ಳಿ ಗಡಿ ಉತ್ತರಕ್ಕೆ —ಅಮಾನಿ ಬಲ್ಲದಕೆರೆ ಮತ್ತು ಜಂಗಂಕೋಟೆ ಗಡಿ. ದಕ್ಷಿಣಕ್ಕೆ —ವೋಬಳಾಪುರ ಮತ್ತು ಗುಂಡ್ರಹಳ್ಳಿ ಸರಹದ್ದು ಈ ಮಧ್ಯೆ ಇರತಕ್ಕ ಪೂರಾಗ್ರಾಮ —ಜಾರಿ ಚಿಲ್ಲರೆ ಇನಾಂತಿ ಶಿವಾಯಿ.	ಎ. ಗು.	ರೂ. ಆ. ಪೈ.			
						ಪರಂಪೋಕು	147—37	2— 4—0		
						ಖುಷ್ಕಿ	71—32	86—14—0		
						ತರಿ	2—23	16— 0—0		
						ಬಾಗಾಯತು	8—28	35— 0—0		
							231— 0	140— 2—0	ಜಂಗಂಕೋಟೆ ಹೋಬಳಿ ಕಾಯಂಗುತ್ತಾ ಚಿಕ್ಕಬಲ್ಲ ಗ್ರಾಮದ ಪಟ್ಟಾ ಜಮೀನಿಗೆ ಸಂಬಂಧಪಟ್ಟ ಸೋಟಿಸ್ ಫೀ ವಗೈರೆ ಸಹಿತವಾದ ಬಾಕೀ ಮೊಬಲಗು. ರೂ. ಆ. ಪೈ. 65—2—0 1—8—0 66—10—8

* ಯಾ ಬಾಕೀ ಇರುವ ಮಟ್ಟಿಗೆ ಸಂದರ್ಭಾನುಸಾರ್ ನಮೂದಿಸತಕ್ಕದ್ದು.

ಎಫ್. ಸಿ. ಕಾರ್, ಡಿಪ್ಯೂಟಿ ಕಮಿಷನರ್.

ಮೈಸೂರು ಡಿಸ್ಟ್ರಿಕ್ಟು.

ಸ್ಥಿರಸ್ವತ್ತಿನ ಹರಾಜಿ ಬಗ್ಗೆ ಕೊಡಲ್ಪಟ್ಟ ಇಸ್ತಿಹಾರ್ ವ ಪ್ರಸಿದ್ಧಪತ್ರಿಕೆ.

ತಾರೀಖು 2ನೇ ಜುಲೈ 1903.

1. ಕಂದಾಯದ ಬಾಕೀದಾರರಾದ ಶ್ರೀರಂಗಪಟ್ಟಣ ಕಸಬಾದಲ್ಲಿರುವ ರಂಗಸಾಮೈಯ್ಯಂಗಾರ್ ಮತ್ತು ಇವರ ತಾಯಿ ರುಕ್ಮಿಣಮ್ಮನವರಿಂದ ಬರಬೇಕಾದ ಜಮ್ಮಿ ಕಂದಾಯದ ಬಾಕೀಗಾಗಿ ಇದರಡಿ ನಮೂದಾಗುವ ಸ್ಥಿರಸ್ವತ್ತು ಮೈಸೂರು ಡಿಸ್ಟ್ರಿಕ್ಟು ಟಿ. ನರಸೀಪುರ ತಾಲ್ಲೂಕು ಸ|| ಚನ್ನಂಜವಡೇರಪುರ ಗ್ರಾಮದಲ್ಲಿ ಸನ್ 1903ನೇ ಆಗಸ್ಟ್ 11ನೇ ತಾರೀಖಿನಲ್ಲಿ ಬಹಿರಂಗವಾದ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟು ಇದೆ.

ಹರಾಜು ಆ ದಿನ ದಿವಿ 11 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ಏಕದಂ ಚಡದರಖಾಸ್ತುದಾರನ ಹೆಸರಿಗೆ ನಿಲ್ಲಿಸಲ್ಪಡುತ್ತೆ.

2. ಸದರೀ ಸ್ವತ್ತಿಗಾಗಿ ಹರಾಜುದಾರನು 1902—1903ನೇ ಸಾಲಿಗೆ ಪೂರ್ತಿಯಾಗಿ * ಪಾವತಿ ಮಾಡಬೇಕಾದ ಕಂದಾಯದ ಮೊಬಲಗು ಇದರಡಿ ಕಾಣಿಸಿರುವ ತಖ್ತೆಯಲ್ಲಿ ನಮೂದಿಸಿರುವ ತಪ್ಸೀಲ್ ಮೇರೆಗೆ 7—13—0 ರೂಪಾಯಿ ಆಗಿರುತ್ತೆ.

3. ಹರಾಜು ಕಾಲದಲ್ಲಿ ಹರಾಜ್‌ದಾರನು ಹರಾಜ್ ಮೊಬಲಗಿನ ಕೇಕಡಾ 25 ರೂಪಾಯನ್ನು ಡಿಪಾಜಿಟ್ಟು ಹಾಜರ್ಮಾಡಬೇಕಾಗಿರುತ್ತೆ. ಅದು ಜಾತಾ ಹರಾಜು ಬಾಬತು ಬಾಕೀ ಮೊಬಲಗು ಹರಾಜು ತಾರೀಖು ಲಾಗಾಯಿತು 15 ದಿವಸಗಳಲ್ಲಿ ಪಾವತಿ ಮಾಡಲ್ಪಡದೇ ಹೋದಲ್ಲಿ ಮೇಲೆ ಹೇಳಿದ ಡಿಪಾಜಿಟ್ಟು ಮೊಬಲಗನ್ನ ಹಾಜರ್ಮಾಡಿದವನು ಕಳಿದುಕೊಳ್ಳಲು ಗುರಿಯಾಗುತ್ತಾನೆ.

4. ಅಂಥಾ ಡಿಪಾಜಿಟ್ಟು ಮೊಬಲಗು ಹಾಜರ್ಮಾಡಲ್ಪಡದೆ ಯಾ ಹರಾಜು ಬಾಬತು ಬಾಕಿ ಮೊಬಲಗು ಪಾವತಿ ಮಾಡಲ್ಪಡದೇ ಹೋದ್ದಾಗ್ಯೆ ಸದರೀ ಸ್ವತ್ತು ಮೊದಲು ಹರಾಜ್‌ದಾರನ ಖರ್ಚಿನಿಂದಲೂ ಮತ್ತು ಅವನಿಗೆ ಅದರಿಂದ ಉಂಟಾಗಬಹುದಾದ ನಷ್ಟಕ್ಕೆ ಗುರಿಪಡಿಸಿಯೂ ಪುನಹ ಹರಾಜು ಮಾಡಲ್ಪಡುತ್ತೆ.

5. ಹರಾಜಿನಲ್ಲಿ ಸವಾಲ್ ಮಾಡತಕ್ಕ ಜನಗಳು ಖುದ್ದು ತಮ್ಮ ಸ್ವಂತಕ್ಕೋಸ್ಕರ ಸವಾಲ್ ಮಾಡುತ್ತಾರೆಯೇ ಯಾ ವಿಜಂಟು ಯಾ ಮುತಾಲೀಕರಾಗಿ ಸವಾಲ್ ಮಾಡುತ್ತಾರೆಯೇ ಎಂಬ ಅಂಶವನ್ನ ತಿಳಿಸಬೇಕೆಂತಲೂ, ಇತರರಿಗೋಸ್ಕರ ಮುತಾಲೀಕರಾಗಿ ಸವಾಲ್ ಮಾಡುವ ಸಂದರ್ಭದಲ್ಲಿ ಅಂಥಾ ತಮ್ಮ ಯಜಮಾನರಿಂದ ಸಹಿ ಮಾಡಲ್ಪಟ್ಟ ಲಿಖಿತವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡುವಂತೆಯೂ ಕೇಳಲ್ಪಡಬಹುದು. ಅದನ್ನ ಅವರು ಹಾಜರ್ಮಾಡದೆ ಹೋದಲ್ಲಿ ಅವರ ಸವಾಲುಗಳು ತಿರಸ್ಕರಿಸಲ್ಪಡಬಹುದು.

6. ಹರಾಜಿನಲ್ಲಿ ಸ್ವತ್ತು ಯಾರ ಹೆಸರಿಗಾದರೂ ನಿಲ್ಲಿಸಲ್ಪಡುವದಕ್ಕೆ ಮುಂಚಿತವಾಗಿ, ಬಾಕೀದಾರನಾಗಲೆ ಆತನ ತರಫಿನವನಾಗಿ ಪ್ರವರ್ತಿಸುವ ಯಾ ಸದರೀ ಸ್ವತ್ತಿನಲ್ಲಿ ಬಾಧ್ಯತೆ ಇರುತ್ತೆಂದು ಹೇಳುವ ಯಾವ ಇತರ ಮನುಷ್ಯನೇ ಆಗಲಿ ಬಾಕಿಯಲ್ಲಿ ಬಂದಿರುವ ಪೂರಾ ಕಂದಾಯದ ಹಣವನ್ನೂ, ಬಡ್ಡಿ ಮತ್ತು ಇತರ ಖರ್ಚುಗಳ ಸಮೇತ ಹಾಜರ್ಮಾಡುವ ಪಕ್ಷಕ್ಕೆ ಹರಾಜು ನಿಲ್ಲಿಸಲ್ಪಡುತ್ತೆ.

7. ಹರಾಜು ಡೆಪ್ಯೂಟಿ ಕಮ್ಮಿಷನರವರಿಂದ ಮಂಜೂರ್ಮಾಡಲ್ಪಡುವ ತನಕ ಸ್ವತ್ತಿನ ಹರಾಜು ಪೂರ್ತಿಯಾಗುವದಿಲ್ಲ.

8. ಹರಾಜಿನಲ್ಲಿ ತೆಗದುಕೊಂಡವರು ಹರಾಜ್ ಮೊಬಲಗನ್ನ ಪೂರ್ತಿಯಾಗಿ ಪಾವತಿ ಮಾಡಿದ ಮೇಲೆ ಡೆಪ್ಯೂಟಿ ಕಮ್ಮಿಷನರವರಿಂದ ಹರಾಜು ಮಂಜೂರ್ಮಾಡಲ್ಪಟ್ಟ ಕೂಡ್ಲೆ, ಹರಾಜುದಾರು ಸದರೀ ಸ್ವತ್ತಿನ ಸ್ವಾಧೀನವನ್ನ ಹೊಂದುವರು. ಮತ್ತು ಸದರೀ ಸ್ವತ್ತು ಹರಾಜುದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು ಡೆಪ್ಯೂಟಿ ಕಮ್ಮಿಷನರವರಿಂದ ಸೈಕ್ ವೊಹರ್ ಮಾಡಲ್ಪಟ್ಟು ಒಂದು ಹರಾಜ್ ಸರಟಿಫಿಕೇಟ್ ಆತನಿಗೆ ಕೊಡಲ್ಪಡುವದು. ಸ್ವತ್ತಿನ ವಿವರಣೆಯಲ್ಲಿಯೂ ಯಾ ವಿಸ್ತೀರ್ಣದಲ್ಲಿಯೂ ಇರುವ ಸ್ಖಲಿತ್ಯಗಳಿಗೆ ಗವರ್ಮೆಂಟನವರು ಜವಾಬ್‌ದಾರ್ರಲ್ಲವೆಂಬ ಅಂಶವನ್ನ ಸ್ಪಷ್ಟವಾಗಿ ತಿಳಿದಿರತಕ್ಕದ್ದು.

9. ಹರಾಜಿನಿಂದ ತಮಿಗೆ ನಷ್ಟ ಉಂಟಾಯಿತೆಂದು ಎಣಿಸುವ ಜನಗಳು ಹರಾಜು ತಾರೀಖು ಲಾಗಾಯಿತು 30 ದಿವಸಗಳಲ್ಲಿ ಡೆಪ್ಯೂಟಿ ಕಮ್ಮಿಷನರವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಮತ್ತು ಅವರ ಹುಕುಮಿನ ಮೇಲೆ ಕಾನೂನಿನಿಂದ ವಿಧಿಸಲ್ಪಟ್ಟು ವಾಯಿದೆಯಲ್ಲಿ ಗವರ್ಮೆಂಟನವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಸ್ವತಂತ್ರರಾಗಿರುತ್ತಾರೆ. ಸ್ವತ್ತಿನ ವಿಕ್ರಯವು ಅಂತಿಮವಾದ ಲಿನಲ್ಲಿ ಆಗುವ ಫೈಸಲ್ ಹುಕುಮಿಗೆ ಬದ್ಧವಾಗಿರತಕ್ಕದ್ದು:—

ತಾಲ್ಲೂಕು.	ಹೋಬಳಿ.	ಗ್ರಾಮ.	ಬಾಕೀದಾರರ ಹೆಸರು.	ಸ್ವತ್ತಿನ ತಪ್ಸೀಲ್. ಕಟ್ಟಡಗಳು. ಹತ್ತಿರದ ಹೆಸರು.	ಅಂದಾಜಾ ಕಿಮ್ಮತ್ತು.	ಜಮೀನು. ನಂಬರ್ ಉಪನಾ ಜಮೀನಿನ ಹೆಸರು.	ಖುಸ್ಕಿ, ಜಿರೀ ಅಥವಾ ಬಾಗಾಯತು.	ವಿಸ್ತೀರ್ಣ.	ಅಕಾರ.	ಸರ್ಕಾರಕ್ಕೆ ಬರಬೇಕಾದ ನೋಟೀಸ್ ಫೀ ಮೈಸೂರ್ ಸಹಿತವಾದ ಬಾಕೀ ಮೊಬಲಗು.			
										ರೂ.	ಆ.	ಪೈ.	
ಟಿ. ನರಸೀಪುರ	ರಂಗಸಮುದ್ರ	ಸ|| ಚನ್ನಂಜಪಡೇರ ಪುರ	ರಂಗಸಾಮಯ್ಯಂಗಾರ್ ವಗೈರೆ	...	ರೂ. ಆ. ಪೈ.	ಸರ್ವಮಾನ್ಯ ಚನ್ನಂಜವಡೇರ ಪುರ ಗ್ರಾಮಕ್ಕೆ.		ರೂ. ಆ. ಪೈ.				
				..					ಬೇರೀಜು.	6	5	0	ಇರಿಗೇಷನ್ ನೋಟೀಸ್ ವಗೈರೆ
										1	8	0	
									289-5-4	7	13	0	

* ಯಾ ಬಾಕೀ ಇರುವ ಮಟ್ಟಿಗೆ ಸಂದರ್ಭಾನುಸಾರ ನಮೂದಿಸತಕ್ಕದ್ದು.

ಸ್ಥಿರಸ್ವತ್ತಿನ ಹರಾಜು ಒಗ್ಗೆ ಕೊಡಲ್ಪಟ್ಟ ಇಸ್ತಿಹಾರ್ ವ ಪ್ರಸಿದ್ಧಪತ್ರಿಕೆ.

ತಾರೀಖು 6ನೇ ಜೂ 1903.

1. ಕಂದಾಯದ ಬಾಕೀದಾರರಾದ ಸರ್ವೆಮಾನ್ಯ ಶೀಹಳ್ಳಿ, ಹುಣಸಗಹಳ್ಳಿ ಈ ಗ್ರಾಮಗಳ ಇನಾಂದಾರ್ ಮಹದೇವಪುರದ ರಾಮು ರಾಯರಿಂದ ಬರಬೇಕಾದ ಜಮೀ ಕಂದಾಯದ ಬಾಕೀಗಾಗಿ ಇದರಡಿ ನಮೂದಾಗುವ ಬಾಧ್ಯತೆ ಕಳಕೊಂಡದ್ದಾಗಿ ಕಂಡೋಕ್ತವಾದ ಸ್ಥಿರಸ್ವತ್ತು ಮೈಸೂರು ಡಿಸ್ಟ್ರಿಕ್ಟು ತಿ|| ನರಸೀಪುರ ತಾಲ್ಲೂಕು ಸ|| ಶೀಹಳ್ಳಿ, ಸ|| ಹ. ಣಸಗಹಳ್ಳಿ ಗ್ರಾಮದಲ್ಲಿ 10—8—1903ನೇ ತಾರೀಖಿನಲ್ಲಿ ಬಹಿರಂಗವಾದ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟು ಇದ.

ಹರಾಜು ಡಿಪೋ ತಾರೀಖು ದಿವಿ 11 ಘಂಟೆಗ ಉಪಕ್ರಮಿಸಲ್ಪಡುತ್ತೆ. ಸ್ವತ್ತು ಏಕದಂ ಚಡ ದರಖಾಸ್ತುದಾರನ ಹೆಸರಿಗೆ ನಿಲ್ಲಿಸಲ್ಪಡುತ್ತೆ.

2. ಸದರೀ ಸ್ವತ್ತಿಗಾಗಿ ಹರಾಜುದಾರನು 1902—1903ನೇ ಸಾಲಿಗೆ ಪೂರ್ತಿಯಾಗಿ * ಪಾವತಿ ಮಾಡಬೇಕಾದ ಕಂದಾಯದ ಮೊಬಲಗು ಇದರಡಿ ಕಾಣಿಸಿರುವ ತಖ್ತೆಯಲ್ಲಿ ನಮೂದಿಸಿರುವ ತಪ್ಸೀಲ್ ಮೇರಿಗೆ 155—2—9 ರೂಪಾಯಿ ಆಗಿರುತ್ತೆ.

3. ಹರಾಜು ಕಾಲದಲ್ಲಿ ಹರಾಜ್‌ದಾರನು ಹರಾಜ್ ಮೊಬಲಗಿನ ಕೇಕಡಾ 25 ರೂಪಾಯಿಗಳನ್ನ ಡಿಪಾಜಿಟ್ಟು ಹಾಜರ್ಮಾಡಬೇಕಾಗಿರುತ್ತೆ. ಅದು ಜಾತ್ತಾ ಹರಾಜು ಬಾಬತು ಬಾಕೀ ಮೊಬಲಗು ಹರಾಜ್ ತಾರೀಖು ಲಾಗಾಯಿತು 15 ದಿವಸಗಳಲ್ಲಿ ಪಾವತೀ ಮಾಡಲ್ಪಡದೇ ಹೋದಲ್ಲಿ ಮೇಲೆ ಹೇಳಿದ ಡಿಪಾಜಿಟ್ಟು ಮೊಬಲಗನ್ನ ಹಾಜರ್ಮಾಡಿದವನು ಕಳದುಕೊಳ್ಳಲು ಗುರಿಯಾಗುತ್ತಾನೆ.

4. ಅಂಥಾ ಡಿಪಾಜಿಟ್ಟು ಮೊಬಲಗು ಹಾಜರ್ಮಾಡಲ್ಪಡದೆ ಯಾ ಹರಾಜು ಬಾಬತು ಬಾಕೀ ಮೊಬಲಗು ಪಾವತಿ ಮಾಡಲ್ಪಡದೆ ಹೋದಾಗ್ಯೆ ಸದರೀ ಸ್ವತ್ತು ಮೊದಲು ಹರಾಜುದಾರನ ಖರ್ಚಿನಿಂದಲೂ ಮತ್ತು ಅವನಿಗೆ ಅದರಿಂದ ಉಂಟಾಗಬಹುದಾದ ನಷ್ಟಕ್ಕೆ ಗುರಿಪಡಿಸಿಯೂ ಪುನಃ ಹರಾಜು ಮಾಡಲ್ಪಡುತ್ತೆ.

5. ಹರಾಜನಲ್ಲಿ ಸವಾಲ್ ಮಾಡತಕ್ಕ ಜನಗಳು ಖುದ್ದು ತಮ್ಮ ಸ್ವಂತಕ್ಕೋಸ್ಕರ ಸವಾಲ್ ಮಾಡುತ್ತಾರೆಯೇ ಯಾ ಏಜಂಟು ಯಾ ಮುತಾಲೀಕರಾಗಿ ಸವಾಲ್ಮಾಡುತ್ತಾರೆಯೇ ಎಂಬ ಅಂಶವನ್ನ ತಿಳಿಸಬೇಕೆಂತಲೂ, ಇತರರಿಗೋಸ್ಕರ ಮುತಾಲೀಕರಾಗಿ ಸವಾಲ್ಮಾಡುವ ಸಂದರ್ಭದಲ್ಲಿ ಅಂಥಾ ತಮ್ಮ ಏಜವಾನರಿಂದ ಸಹಿ ಮಾಡಲ್ಪಟ್ಟ ಲಿಖಿತವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡುವಂತೆಯೂ ಕೇಳಲ್ಪಡಬಹುದು. ಆದನ್ನ ಅವರು ಹಾಜರ್ಮಾಡದೆ ಹೋದಲ್ಲಿ ಅವರ ಸವಾಲುಗಳು ತಿರಸ್ಕರಿಸಲ್ಪಡಬಹುದು.

6. ಹರಾಜಿನಲ್ಲಿ ಸ್ವತ್ತು ಯಾರ ಹೆಸರಿಗಾದರೂ ನಿಲ್ಲಿಸಲ್ಪಡುವದಕ್ಕೆ ಮುಂಚಿತವಾಗಿ, ಬಾಕೀದಾರನಾಗಲೀ ಆತನ ತರಫಿನವನಾಗಿ ಪ್ರವರ್ತಿಸುವ ಯಾ ಸದರೀ ಸ್ವತ್ತಿನಲ್ಲಿ ಬಾಧ್ಯತೆ ಇರುತ್ತೆಂದು ಹೇಳುವ ಯಾವ ಇತರ ಮನುಷ್ಯನೇ ಆಗಲೀ ಬಾಕಿಯಲ್ಲಿ ಬಂದಿರುವ ಪೂರಾ ಕಂದಾಯದ ಹಣವನ್ನೂ, ಬಡ್ಡಿ ಮತ್ತು ಇತರ ಖರ್ಚುಗಳ ಸಮೇತ ಹಾಜರ್ಮಾಡುವ ಪಕ್ಷಕ್ಕೆ ಹರಾಜು ನಿಲ್ಲಿಸಲ್ಪಡುತ್ತೆ.

7. ಹರಾಜು ಡೆಪ್ಯೂಟಿ ಕಮಿಷನರವರಿಂದ ಮಂಜೂರ್ಮಾಡಲ್ಪಡುವ ತನಕ ಸ್ವತ್ತಿನ ಹರಾಜು ಪೂರ್ತಿಯಾಗುವದಿಲ್ಲ.

8. ಹರಾಜಿನಲ್ಲಿ ತೆಗದುಕೊಂಡವರು ಹರಾಜ್ ಮೊಬಲಗನ್ನ ಪೂರ್ತಿಯಾಗಿ ಪಾವತಿ ಮಾಡಿದ ಮೇಲೆ ಡೆಪ್ಯೂಟಿ ಕಮಿಷನರವರಿಂದ ಹರಾಜು ಮಂಜೂರ್ಮಾಡಲ್ಪಟ್ಟ ಕೂಡ್ಲೆ, ಹರಾಜುದಾರು ಸದರೀ ಸ್ವತ್ತಿನ ಸ್ವಾಧೀನವನ್ನು ಹೊಂದುವರು. ಮತ್ತು ಸದರೀ ಸ್ವತ್ತು ಹರಾಜುದಾರನ ಹೆಸರಿನಲ್ಲಿ ರಜಸ್ಟರ್ ಮಾಡಲ್ಪಟ್ಟು ಡೆಪ್ಯೂಟಿ ಕಮಿಷನರವರಿಂದ ಸೈ ಮೊಹರ್ ಮಾಡಲ್ಪಟ್ಟ ಬಂದು ಹರಾಜ್ ಸರಟಿಫಿಕೇಟ್ ಆತನಿಗೆ ಕೊಡಲ್ಪಡುವದು. ಸ್ವತ್ತಿನ ವಿವರಣೆಯಲ್ಲಿಯಾಗಲಿ ಯಾ ವಿಸ್ತೀರ್ಣದಲ್ಲಿಯಾಗಲಿ ಇರುವ ಸ್ಥಾಲಿತ್ಯಗಳಿಗೆ ಗವರ್ನಮೆಂಟನವರು ಜವಾಬ್‌ದಾರ್ರಲ್ಲವೆಂಬ ಅಂಶವನ್ನ ಸ್ಪಷ್ಟವಾಗಿ ತಿಳಿದಿರತಕ್ಕದ್ದು.

9. ಹರಾಜಿನಿಂದ ತಮಿಗೆ ನಷ್ಟ ಉಂಟಾಯಿತೆಂದು ಎಣಿಸುವ ಜನಗಳು ಹರಾಜು ತಾರೀಖು ಲಾಗಾಯಿತು 30 ದಿವಸಗಳಲ್ಲಿ ಡೆಪ್ಯೂಟಿ ಕಮ್ಮಿಷನರವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಮತ್ತು ಅವರ ಹುಕುಮಿನ ಮೇಲೆ ಕಾನೂನಿನಿಂದ ವಿಧಿಸಲ್ಪಟ್ಟ ವಾಯಿದೆಯಲ್ಲಿ ಗವರ್ನಮೆಂಟನವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಸ್ವತಂತ್ರರಾಗಿರುತ್ತಾರೆ. ಸ್ವತ್ತಿನ ವಿಕ್ರಯವು ಅಂಥಾ ಅಪ್ಪೀಲಿನಲ್ಲಿ ಆಗುವ ಫೈನಲ್ ಹುಕುಮಿಗೆ ಬದ್ಧವಾಗಿರತಕ್ಕದ್ದು :—

ತಾಲ್ಲೂಕು.	ಹೋಬಳಿ.	ಗ್ರಾಮ.	ಬಾಕೀದಾರರ ಹೆಸರು.	ಸ್ವತ್ತಿನ ತಪ್ಸೀಲ್. ಕಟ್ಟಡಗಳು. ಕಟ್ಟಡದ ಹೆಸರು.	ಕಟ್ಟಡಗಳು. ಅಂದಾಜು ಕಿಮ್ಮತ್ತು.	ಜಮೀನು. ನಂಬರ್ ಅಥವಾ ಜಮೀನಿನ ಹೆಸರು.	ಜಮೀನು. ಖುಷ್ಕಿ, ತರೀ ಅಥವಾ ಬಾಗಾಯ್ತು.	ಜಮೀನು. ವಿಸ್ತೀರ್ಣ.	ಜಮೀನು. ಅಕಾರ.	ಸರ್ಕಾರಕ್ಕೆ ಬರಬೇಕಾದ ನೋಟಿಸ್ ಫೀ ವಗೈರೆ ಸಹಿತವಾದ ಬಾಕೀ ಮೊಬಲಗು. ರೂ.	ಆ.	ಪೈ.
ನರಸೀಪುರ	ಬನ್ನಿಸಹಳ್ಳಿ	ಸ|| ಶೀಹಳ್ಳಿ	ಮಹದೇವಪುರದ ರಾಮರಾಯರು				ಎ. ಗು.	ರೂ. ಆ. ಪೈ.				
				ಪೂರಾಗ್ರಾಮ ...				624 35	1148 14 6				
				1902—1903ನೇ ಚಾಲ್ತಿ ಶುಭಕೃತು ಸಂವತ್ಸರಕ್ಕೆ ...				29 ಗಜಾ		71	12	10
		ಸ|| ಹುಣಸಗಹಳ್ಳಿ	ಮಹದೇವಪುರದ ರಾಮರಾಯರು									
				ಪೂರಾಗ್ರಾಮ ...				363 38	412 4 4				
				ಪ್ಲವ ಸಾಲ್ ಬಾಕಿ 1902—1903ನೇ ಚಾಲ್ತಿ 4—9—3				19½ ಗಜಾ	ಬಡ್ಡಿ 0—4—0			
				ಶುಭಕೃತುಸಾಲ್ ಬಾಬತು 77—0—8						83	5	11
				ನೋಟಿಸ್ ಫೀ 0—8—0								
				ಜಪ್ತಿ ಫೀ 0—8—0								
				ಹರಾಜು ಇಸ್ತಿಹಾರ್ ಫೀ 0—8—0								
									ಜುಮ್ಲಾ ..	155	2	9

* ಯಾ ಬಾಕಿ ಇರುವ ವಟ್ಟಿಗೆ ಸಂದರ್ಭಾನುಸಾರ ನಮೂದಿಸತಕ್ಕದ್ದು.

ಎಂ. ಕಾಂತರಾಜೆ ಅರಸ್,
ಅಫೀಷಿಯೇಟಿಂಗ್ ಡೆಪ್ಯೂಟಿ ಕಮ್ಮಿಷನರ್.

ಹಾಸನ ಡಿಸ್ಟ್ರಿಕ್ಟ್.

ನೋಟಿಸ್.

ತಾರೀಖು 9ನೇ ಜುಲೈ 1903.

ಇದರಿಂದ ಸಮಸ್ತ ಜನರಿಗು ತಿಳಿಯಪಡಿಸುವದೇನಂದರೆ—ಹೊಳೆ ನರಸೀಪುರದಲ್ಲಿ ಹೇಮಾವತಿ ನದಿಗೆ ಸೇತುವೆ ಕಟ್ಟಿಸಿ ಹೊಸ ರಸ್ತೆ ಹಾಕಿದ ಸಂದರ್ಭದಲ್ಲಿ ಸರಕಾರಿ ರಸ್ತೆಗೋಸ್ಕರ ಇದೆ ಟರ್ವನಲ್ಲಿ ದೊಣ್ಣೈಯ್ಯನ ಜಂಗವು ಮತವೆಂಬ—ಪೂರ್ವಕ್ಕೆ—ನಂಜಪ್ಪನ ಸರ್ವೆ 94ನೇ ಪೈಕಿ ಹೊಲ, ಪಶ್ಚಿಮಕ್ಕೆ—ಸರ್ವೆ 95ನೇ ಹೊಲ, ದಕ್ಷಿಣಕ್ಕೆ—ಹಾಸನದ ರಸ್ತೆ, ಉತ್ತರಕ್ಕೆ—ಕೆರೆಯು ನಾಲೆ—ಈ ಮಧ್ಯೆ ಪೂರ್ವ ಪಶ್ಚಿಮ ಗಜ 40, ದಕ್ಷಿಣೋತ್ತರ ಗಜ 60, ಸಲೆ ಗಜ 2400 ವುಳ್ಳ ಪಾಳು ಜಾಗಾ ಪೈಕಿ ಸರಕಾರಕ್ಕೆ ತೆಗದುಕೊಂಡ 1815 ಗಜ ವುಳ್ಳ ಜಾಗಾಕ್ಕೆ ಮಾಲೀಕರಿಗೆ ಪಾವತಿಯಾಗಲು 12 ಹನ್ನೆರಡು ರೂಪಾಯಿ ಕಾಂಪರ್ಸೇಷನ್ ಗೊತ್ತಾಗಿ ಸದರೀ ಮತದ ಜಾಗಾಕ್ಕೆ ವಾರಸುದಾರು ನಿರ್ಧರ ಪಡದೆ ಬಾಕಿಯಲ್ಲಿರುತ್ತೆ. ಮೇಲ್ಕಂಡ ಪಾಳು ಜಾಗಾವು ಯಾರ ಸ್ವಾಧೀನದಲ್ಲಿದ್ದು ಸದರೀ ಕಾಂಪರ್ಸೇಷನ್ ಮೊಬಲಗ್ಗೆ ಹಕ್ಕುದಾರು ಯಾರೋ ಅವರು ತಮ್ಮ ಹಕ್ಕನ್ನು ತಕ್ಕ ಕೋರ್ಟಿನಲ್ಲಿ ಸ್ಥಿರಪಡಿಸಿಕೊಂಡು ಆ ಕೋರ್ಟು ಸರ್ಟಿಫಿಕೇಟನ್ನು ಈ ನೋಟೀಸು ಗೆಜೆಟ್ಟಿನಲ್ಲಿ ಘಾಯಿಷ್ಠಾದ ತಾರೀಖು ಲಾಗಾಯಿತು 6 ಆರು ತಿಂಗಳ ವಳಗಾಗಿ ನಮ್ಮಲ್ಲಿ ಹಾಜರ್ಮಾಡಿದಲ್ಲಿ ಅಂಥಾವರಿಗೆ ಕಾಂಪರ್ಸೇಷನ್ ಮೊಬಲಗು ಪಾವತಿ ಮಾಡಿಸುತ್ತೆ. ಇದಕ್ಕೆ ತಪ್ಪಿದಲ್ಲಿ ಮೇಲ್ಕಂಡ ಮೊಬಲಗು ಯಾರಿಗೂ ಕಿಕ್ಕಲಾರದು.

ಡಿ. ದೇವರಾಜೆ ಅರಸ್,
ಡೆಪ್ಯುಟಿ ಕಮಿಷನರ್.

ಬೆಂಗಳೂರು ಡಿಸ್ಟ್ರಿಕ್ಟ್ ಜಡ್ಜ್‌ರವರ ಕೋರ್ಟಿನಲ್ಲಿ.

ಸ್ ೧೯೦೩—೧೯೦೪ನೇ ಇಸವಿ ಅರ್ಜೀ ನಂಬರ್ 5.

ಮೃತಪಟ್ಟ ದೊಮ್ಮಸಂದ್ರದ ರುದ್ರಪ್ಪನವರ ಆಸ್ತೀ ವಿಷಯದಲ್ಲಿ —

ಅರ್ಜೀದಾರು ಬೆಂಗಳೂರಿನಲ್ಲಿರುವ ಬಸವ್ಮ, ಮೃತಪಟ್ಟ ಸದರೀ ದೊಮ್ಮಸಂದ್ರದ ರುದ್ರಪ್ಪನವರಿಗೆ ಹೆಂಡತಿ ಆಗಬೇಕೆಂಬ ಹಕ್ಕುದಾರಿ ಮೇಲೆ ಬೆಂಗಳೂರು ತಾಲ್ಲೂಕು ದೊಮ್ಮಸಂದ್ರದಲ್ಲಿ ವಾಸಸ್ಥರಾಗಿ ಮೃತಪಟ್ಟ ದೊಮ್ಮಸಂದ್ರದ ರುದ್ರಪ್ಪನವರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ ಸ್ ೧೯೦೧ನೇ ಇಸವಿ 7ನೇ ರೆಗ್ಯುಲೇಷನ್ ಪ್ರಕಾರ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಬಸವ್ಮನೆಂಬುವರ ಅರ್ಜಿಯನ್ನು ಸ್ ೧೯೦೩ನೇ ಇಸವಿ ಆಗಸ್ಟು ತಿಂಗಳು ತಾರೀಖು 25ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿವರ್ಸಿ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ದೊಮ್ಮಸಂದ್ರದ ರುದ್ರಪ್ಪನವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ್ ೧೯೦೩ನೇ ಇಸವಿ ಜುಲೈ ತಿಂಗಳು 7ನೇ ತಾರೀಖಿನಲ್ಲಿ ಕೋರ್ಟು ಮೊಹರಿನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಸ್ ೧೯೦೨—೧೯೦೩ನೇ ಇಸವಿ ಅರ್ಜೀ ನಂಬರ್ 198.

ಮೃತಪಟ್ಟ ಕುರುಬರ ಆನೆಪ್ಪನೆಂಬುವರ ಆಸ್ತೀ ವಿಷಯದಲ್ಲಿ—

ಅರ್ಜೀದಾರು ಆನೆಕಲ್ಲು ತಾಲ್ಲೂಕು ಅತ್ತಿಬೆಲೆ ಹೋ|| ಇಂಡ್ಲಿಬೆಲೆ ಗ್ರಾಮದಲ್ಲಿರುವ ಕೆಂಪಮ್ಮ, ಮೃತಪಟ್ಟ ಸದರೀ ಕುರುಬರ ಆನೆಪ್ಪನೆಂಬುವರಿಗೆ ಹೆಂಡತಿ ಆಗಬೇಕೆಂಬ ಹಕ್ಕುದಾರಿ ಮೇಲೆ ಆನೆಕಲ್ಲು ತಾಲ್ಲೂಕು ಅತ್ತಿಬೆಲೆ ಹೋ|| ಇಂಡ್ಲಿಬೆಲೆ ವಾಸಸ್ಥರಾಗಿ ಮೃತಪಟ್ಟ ಕುರುಬರ ಆನೆಪ್ಪನೆಂಬುವರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ ಸ್ ೧೯೦೧ನೇ ಇಸವಿ 7ನೇ ರೆಗ್ಯುಲೇಷ್ ಪ್ರಕಾರ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಕೆಂಪಮ್ಮನೆಂಬುವರ ಅರ್ಜಿಯನ್ನು ಸ್ ೧೯೦೩ನೇ ಇಸವಿ ಆಗಸ್ಟು ತಿಂಗಳು ತಾರೀಖು 25ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿವರ್ಸಿ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಕುರುಬರ ಆನೆಪ್ಪನೆಂಬುವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ್ ೧೯೦೩ನೇ ಇಸವಿ ಜುಲೈ ತಿಂಗಳು 9ನೇ ತಾರೀಖಿನಲ್ಲಿ ಕೋರ್ಟು ಮೊಹರಿನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಸ್ ೧೯೦೨—೧೯೦೩ನೇ ಇಸವಿ ಅರ್ಜೀ ನಂಬರ್ 206.

ಮೃತಪಟ್ಟ ಹೊಸಹಳ್ಳಿ ಅಂಕೇಗೌಡರ ಆಸ್ತೀ ವಿಷಯದಲ್ಲಿ—

ಅರ್ಜೀದಾರು ಕೊಳ್ಳೇಪೇಟೆ ತಾಲ್ಲೂಕು ನಾಗಾವಾರದಲ್ಲಿರುವ 1ನೇ ಅಂಕೇಗೌಡ ವುರುಫ್ ಕೆಂಜೇಗೌಡ ಮತ್ತು 2ನೇ ಲಿಂಗೇಗೌಡ, ಮೃತಪಟ್ಟ ಸದರೀ ಹೊಸಹಳ್ಳಿ ಅಂಕೇಗೌಡರಿಗೆ ಮಕ್ಕಳು ಆಗಬೇಕೆಂಬ ಹಕ್ಕುದಾರಿ ಮೇಲೆ ಕೊಳ್ಳೇಪೇಟೆ ತಾಲ್ಲೂಕು ನಾಗಾವಾರದಲ್ಲಿ ವಾಸಸ್ಥರಾಗಿ ಮೃತಪಟ್ಟ ಹೊಸಹಳ್ಳಿ ಅಂಕೇಗೌಡರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ ಸ್ ೧೯೦೧ನೇ ಇಸವಿ 7ನೇ ರೆಗ್ಯುಲೇಷ್ ಪ್ರಕಾರ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ 1ನೇ ಅಂಕೇಗೌಡ ವುರುಫ್ ಕೆಂಜೇಗೌಡ ಮತ್ತು 2ನೇ ಲಿಂಗೇಗೌಡರ ಅರ್ಜಿಯನ್ನು ಸ್ ೧೯೦೩ನೇ ಇಸವಿ ಆಗಷ್ಟು ತಿಂಗಳು ತಾರೀಖು 25ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿವರ್ಸಿ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರಿ ಮೃತಪಟ್ಟ ಹೊಸಹಳ್ಳಿ ಅಂಕೇಗೌಡರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ್ ೧೯೦೩ನೇ ಇಸವಿ ಜುಲೈ ತಿಂಗಳು 9ನೇ ತಾರೀಖಿನಲ್ಲಿ ಕೋರ್ಟು ಮೊಹರಿನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.